ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4   ಸಂಚಿಕೆ 9   ಫೆಬ್ರವರಿ 28, 1982   ಬೆಲೆ 60 ಪೈಸೆ

ಸಂಪಾದಕೀಯ

ಮತ್ತೆ ದರ ಏರಿಕೆ

1982–83ನೇ ವರ್ಷದ ರೈಲ್ವೆ ಆಯವ್ಯಯ ಮುಂಗಡ ಪತ್ರದಲ್ಲಿ ಎಲ್ಲ ದರ್ಜೆಯ ರೈಲು ಪ್ರಯಾಣದ ದರಗಳನ್ನು ಏಪ್ರಿಲ್ ಒಂದರಿಂದ ಹೆಚ್ಚಿಸಲಾಗಿದೆ. ಇದಕ್ಕೆ ಮೊದಲೇ ರೈಲು ಸಾಮಗ್ರಿ ಸಾಗಣೆ ದರಗಳನ್ನು ಏರಿಸಲಾಗಿತ್ತು. ದಿನೇ ದಿನೇ ಬೃಹದಾಕಾರವಾಗಿ ಬೆಳೆಯುತ್ತಿರುವ ಬೆಲೆ ಏರಿಕೆ ಮತ್ತು ಕ್ಷೀಣಿಸುತ್ತಿರುವ ಕೊಳ್ಳುವ ಶಕ್ತಿಯಿಂದಲಾಗಿ ಕಂಗೆಡುತ್ತಿರುವ ಜನತೆಯ ಮೇಲೆ ರೈಲು ಪ್ರಯಾಣ ದರ ಹೆಚ್ಚಳವು ಇನ್ನೂ ಹೆಚ್ಚಿನ ಹೊರೆಯನ್ನು ಹೇರಲಿದೆ. ಇತ್ತೀಚೆಗೆ ಸಾಮಗ್ರಿ ಸಾಗಿಗೆ ದರ ಏರಿಸಿರುವುದು, ಮತ್ತು ಇದೀಗ ರೈಲು ಪ್ರಯಾಣದ ದರವನ್ನು ಏರಿಸಿರುವುದು ಹಣದುಬ್ಬರ ಮತ್ತು ಬೆಲೆ ಏರಿಕೆಗಳನ್ನು ಮತ್ತೂ ಹೆಚ್ಚಿಸುವುದು ಖಂಡಿತ. ಪ್ರಯಾಣದರ ಹೆಚ್ಚಿಸಿರುವ ಸರಕಾರದ ಕ್ರಮ ಖಂಡನೀಯ.

ಒಂದೆಡೆ ರೈಲು ಪ್ರಯಾಣ ದರವನ್ನು ಏರಿಸುತ್ತಿದ್ದರೆ ಇನ್ನೊಂದೆಡೆ ರೈಲ್ವೆ ಇಲಾಖೆಯ ಆಡಳಿತ ವ್ಯವಸ್ಥೆ ತೀರಾ ಹದಗೆಟ್ಟಿದೆ. ದಿನ ನಿತ್ಯ ಸಂಭವಿಸುವ ರೈಲು ಅಪಘಾತಗಳಲ್ಲಿ ನೂರಾರು ಮಂದಿ ಜೀವ ಕಳೆದುಕೊಳ್ಳುತ್ತಿದ್ದಾರೆ. ಸಹಸ್ರಾರು ಮಂದಿ ಅಂಗವಿಕಲರಾಗುತ್ತಿದ್ದಾರೆ. ಪ್ರಯಾಣಿಕರಿಗೆ ಸರಿಯಾದ ಸವಲತ್ತು ಮತ್ತು ಅವರ ಜೀವಕ್ಕೆ ರಕ್ಷಣೆ ಹಾಗೂ ಜನಸಾಮಾನ್ಯರಿಗೆ ತಕ್ಕಂತೆ ವ್ಯವಸ್ಥೆಗಳನ್ನು ಮಾಡುವುದಕ್ಕೆ ಬದಲು ಭ್ರಷ್ಟಾಚಾರ ಮತ್ತು ದುಂದು ವೆಚ್ಚಗಳಿಂದ ಹಣ ಪೋಲಾಗುತ್ತಿದೆ. ಭಯಾನಕವಾಗಿ ಹೆಚ್ಚುತ್ತಿರುವ ರೈಲು ಅಪಘಾತಗಳ ಬಗ್ಗೆ ಪಾರ್ಲಿಮೆಂಟಿನ ಹೊರಗೂ ಒಳಗೂ ಪ್ರತಿಭಟನೆ ಕೇಳಿ ಬರುತ್ತಿದ್ದರೂ ಕೇಂದ್ರ ಸರಕಾರ ಏನೇನೂ ಸಂಭವಿಸಿಲ್ಲ ಎಂಬಂತೆ ತೆಪ್ಪಗೆ ಕೂತಿದೆ!

ಜಾಗತಿಕ ಬ್ಯಾಂಕಿನಿಂದ ಐದುಸಾವಿರ ಕೋಟಿ ರೂಪಾಯಿ ಸಾಲ ತೆಗೆದುಕೊಳ್ಳುವಾಗ ಪ್ರಯಾಣದರ ಮತ್ತು ಸಾಮಗ್ರಿ ಸಾಗಿಗೆ ದರ ಏರಿಸುವುದು ಒಪ್ಪಿಕೊಂಡಿರುವ ಷರತ್ತುಗಳಲ್ಲಿ ಒಂದು ಅದರೊಂದಿಗೆ ಅಂತರಾಷ್ಟ್ರೀಯ ಹಣಕಾಸು ನಿಧಿಯಿಂದ ಸಾಲ ತೆಗೆದುಕೊಂಡಿರುವಾಗಲೂ ಒಪ್ಪಿಕೊಂಡಿರುವ ಷರತ್ತುಗಳು ಸೇರಿ ಈಗ ದರ ಏರಿಸುವುದಕ್ಕೆ ಪ್ರೇರೇಪಣೆ ಮಾಡಿವೆ. ಕೆಲವೇ ದಿನಗಳ ಹಿಂದೆ ಟೆಲಿಫೋನು, ಮತ್ತು ಅಂಚೆ ದರಗಳನ್ನೂ ಏರಿಸಲಾಗಿತ್ತು. ಇವೆಲ್ಲಾ ಮುಂದಿನ ದಿನಗಳಲ್ಲಿ ಏನು ಕಾದಿವೆ ಎಂಬುದರ ಸೂಚನೆ ಮಾತ್ರ.

ಹಣದುಬ್ಬರದಲ್ಲಿ ಸಿಲುಕಿ ಹಾಕಿಕೊಂಡಿರುವ ನಮ್ಮ ಅರ್ಥವ್ಯವಸ್ಥೆಯಲ್ಲಿ ಈ ಎಲ್ಲ ಕ್ರಮಗಳು ಹಣದುಬ್ಬರ ಮತ್ತು ಬೆಲೆ ಏರಿಕೆಗಳನ್ನು ಮತ್ತೂ ಹೆಚ್ಚಿಸುತ್ತವೆ. ಸಂಕಷ್ಟ ಹೆಚ್ಚಿದಂತೆ ದುಡಿಯುವ ವರ್ಗ ಮತ್ತು ಜನತೆ ಪ್ರತಿಭಟಿಸುವುದನ್ನು ಎದುರಿಸಲು ಮತ್ತು ಸಾಲ ಕೊಟ್ಟವರಿಗೆ ಇಲ್ಲಿ ಎಲ್ಲವೂ ಚನ್ನಾಗಿದೆ ಎಂದು ತೋರಿಸುವುದಕ್ಕಾಗಿ ಈಗಾಗಲೇ ಸಾಕಷ್ಟು ಕರಾಳ ಕಾನೂನುಗಳನ್ನೂ ಮಾಡಲಾಗಿದೆ. ಇಂದಿರಾ ಗಾಂಧಿ ಸರಕಾರದ ಈ ಎಲ್ಲ ಜನವಿರೋಧಿ, ಪ್ರಜಾಪ್ರಭುತ್ವವಿರೋಧಿ ಕ್ರಮಗಳನ್ನು ಎಲ್ಲಾ ಪ್ರಜಾಪ್ರಭುತ್ವ ಶಕ್ತಿಗಳೂ ಜನತೆಯೂ ಒಂದಾಗಿ ವಿರೋಧಿಸಲೇಬೇಕು.

—

ಫೆ 23 ರಂದು ಎನ್. ಸಿ. ಸಿ. ಕರೆಯ ಮೇರೆಗೆ ಯಶಸ್ವಿಯಾಗಿ ನಡೆದ

ಪ್ರತಿಭಟನಾ ಪ್ರದರ್ಶನ

ಜ. 19 ರಂದು ನಡೆದ ಅಖಿಲ ಭಾರತ ಸಾರ್ವತ್ರಿಕ ಮುಷ್ಕರದ ಅಪೂರ್ವ ಯಶಸ್ಸಿನ ಹಿನ್ನೆಲೆಯಲ್ಲಿ ರಾಷ್ಟ್ರದ ಅನೇಕ ಕಡೆ ಕಾರ್ಮಿಕರ ಮೇಲೆ ದಬ್ಬಾಳಿಕೆ ನಡೆಯುತ್ತಿದೆ. ಸಹಸ್ರಾರು ಜನರನ್ನು ಕೆಲಸದಿಂದ ಹೊರಹಾಕಲಾಗಿದೆ. 'ಶಿಸ್ತು' ಕ್ರಮ ಕೈಕೊಳ್ಳಲಾಗುತ್ತಿದೆ. ಈ ಕ್ರಮಗಳನ್ನು ಪ್ರತಿಭಟಿಸಿ ಫೆ. 23 ರಂದು ರಾಷ್ಟ್ರಾದ್ಯಂತ ಪ್ರತಿಭಟನಾ ಪ್ರದರ್ಶನ ನಡೆಸಲು ರಾಷ್ಟ್ರೀಯ ಆಂದೋಲನ ಸಮಿತಿ ಕರೆ ಕೊಟ್ಟಿತ್ತು. ಈ ಕರೆಯ ಮೇರೆಗೆ ಎಲ್ಲೆಡೆ ಪ್ರತಿಭಟನಾ ಪ್ರದರ್ಶನ, ಧರಣಿ ಸತ್ಯಾಗ್ರಹ ನಡೆದಿರುವ ವರದಿಯಾಗಿದೆ.

ಹರಿಯಾಣಾದ 'ಹನ್ಸಿ ಕೋ-ಆಪರೇಟಿವ್ ಸ್ಪಿನ್ನಿಂಗ್ ಮಿಲ್ಸ್', ಹಿಸ್ಸಾರನ 'ಕಾಂಕಾಸ್ಟ್ ಲಿಮಿಟೆಡ್' ಮೊದಲಾದ ಆಡಳಿತ ವರ್ಗಗಳು 2000 ಕಾರ್ಮಿಕರನ್ನು ಕೆಲಸದಿಂದ ತೆಗೆದುಹಾಕಿವೆ; ತಮಿಳುನಾಡಿನ ಟೆಕ್ಸ್‌ಟೈಲ್ ಉದ್ದಿಮೆಗಳಲ್ಲಿ ಎಲ್ಲ ಕಾರ್ಮಿಕರ ಎಂಟು ದಿನಗಳ ಸಂಬಳ ಕಡಿತ ಮಾಡಲಾಗಿದೆ; ಅಂಚೆ ಮತ್ತು ತಂತಿ ಕೆಲಸಗಾರರಿಗೆ ಸೇವಾ ಅವಧಿ (ಸರ್ವೀಸ್) ಯಲ್ಲಿ ಕಡಿತ ಮಾಡಲಾಗಿದೆ; ಸಹಸ್ರಾರು ಕಾರ್ಮಿಕರ ಮೇಲೆ ಪೋಲೀಸರು ಮೊಕದ್ದಮೆ ಹೂಡಿದ್ದಾರೆ; ಈ ಎಲ್ಲ ಕ್ರಮಗಳೂ ಜ. 19 ರಂದು ಮುಷ್ಕರದಲ್ಲಿ ಪಾಲ್ಗೊಂಡಿದ್ದಕ್ಕಾಗಿ.

ರಾಜದ್ರೋಹದ ಆಪಾದನೆ:

ಬಿಹಾರ್‌ನ ಮಧೇಪೂರ ಎಂಬಲ್ಲಿ ಒಂದು ಸ್ವಾರಸ್ಯಕರ ಪ್ರಸಂಗ ನಡೆದಿದೆ. ಬಿಹಾರ್‌ನ ಮಂತ್ರಿಯೋರ್ವರು ಮಧೇಪೂರ ಮತ್ತು ಸುತ್ತಮುತ್ತಲಿನ ಸ್ಥಳಗಳ ಉಸ್ತುವಾರಿ (ಮುಷ್ಕರ ವಿಫಲಗೊಳಿಸಲು) ಹೊತ್ತಿದ್ದರು. ಅವರ ಕಾರು ಮಧೇಪೂರಕ್ಕೆ ಬಂದಾಗ ಎಸ್.ಎಫ್.ಐ.ನ ಸಂಗಾತಿ ಶ್ಯಾಮನಂದ ಗಿರಿಯವರ ನಾಯಕತ್ವದಲ್ಲಿ ಕೆಲವು ವಿದ್ಯಾರ್ಥಿಗಳು ಇಂದಿರಾ ಕಾಂಗ್ರೆಸ್ಸಿನ ಜನವಿರೋಧಿ ಧೋರಣೆಗಳ ವಿರುದ್ಧ ಘೋಷಣೆ ಕೂಗಿದರು. ಘೋಷಣೆ ಕೇಳಿದೊಡನೆ ಹುಚ್ಚೆದ್ದ ಮಂತ್ರಿ ಕಾರು ನಿಲ್ಲಿಸಿ ವಿದ್ಯಾರ್ಥಿಗಳೊಡನೆ ವಾಗ್ವಾದಕ್ಕಿಳಿದರು. ಹೊಲಸು ನಾಲಿಗೆಯಿಂದ ಅಸಭ್ಯ ಪದಗಳನ್ನುಗುಳುತ್ತಾ ಆ ಮಂತ್ರಿ ಬೇರೊಂದು ಸ್ಥಳಕ್ಕೆ ಹೊರಟು ಹೋದರು.

(8ನೇ ಪುಟ ನೋಡಿ)

1982 ಮಾರ್ಚ್ 11, 12, 13, 14 ರಂದು

ರೈತ ಸಂಘ ರಾಜ್ಯ ಸಮ್ಮೇಳನ

ಅಖಿಲಭಾರತ ಕಿಸಾನ್ ಸಭಾಕ್ಕೆ ಸೇರ್ಪಡೆಯಾಗಿರುವ ಕರ್ನಾಟಕ ಪ್ರಾಂತ ರೈತ ಸಂಘದ ರಾಜ್ಯ ಸಮ್ಮೇಳನವು 1982 ಮಾರ್ಚ್ 11, 12, 13 ಮತ್ತು 14 ರಂದು ಕೋಲಾರ ಜಿಲ್ಲೆಯ ಮುಳಬಾಗಿಲಿನಲ್ಲಿ ನಡೆಯಲಿದೆ. ಏಪ್ರಿಲ್‌ನಲ್ಲಿ ನಡೆಯಲಿರುವ ಅಖಿಲಭಾರತ ಕಿಸಾನ್ ಸಭಾದ ರಾಷ್ಟ್ರೀಯ ಸಮ್ಮೇಳನಕ್ಕೆ ಪೂರ್ವಭಾವಿಯಾಗಿ ರಾಜ್ಯ ಸಮ್ಮೇಳನವು ನಡೆಯಲಿದೆ. ಕರ್ನಾಟಕ ರಾಜ್ಯದ ಎಲ್ಲಾ 19 ಜಿಲ್ಲೆಗಳಿಂದ ಸುಮಾರು 400 ಪ್ರತಿನಿಧಿಗಳು ರಾಜ್ಯ ಸಮ್ಮೇಳನದಲ್ಲಿ ಭಾಗವಹಿಸುವ ನಿರೀಕ್ಷೆ ಇದೆ. ಸಮ್ಮೇಳನದ ಸಂದರ್ಭದಲ್ಲಿ ಒಂದು ದಿನ ರಾಜ್ಯ ಮಟ್ಟದ ಕೃಷಿ ಕೂಲಿಗಾರರ ಸಮಾವೇಶವೂ ಅಲ್ಲೀ ನಡೆಯಲಿದೆ.

ಸಮ್ಮೇಳನಕ್ಕೆ ಪ್ರತಿ ನೂರು ಸದಸ್ಯರಿಗೆ ಒಬ್ಬರಂತೆ ಪ್ರತಿನಿಧಿಗಳನ್ನು ಕಳುಹಿಸಬೇಕು. ಪ್ರತಿ ಜಿಲ್ಲೆಯಿಂದ ಪ್ರತಿನಿಧಿಗಳು ಅಲ್ಲದೆ ಗರಿಷ್ಟ ಐದು ಮಂದಿ ವೀಕ್ಷಕರನ್ನು ಕಳುಹಿಸಬಹುದು. ಸದಸ್ಯತ್ವವಿಲ್ಲದ ಜಿಲ್ಲೆಗಳಿಂದ ಜಿಲ್ಲೆಗೆ ಗರಿಷ್ಠ 5 ವೀಕ್ಷಕರನ್ನು ಕಳುಹಿಸಬಹುದು. ಪ್ರತಿನಿಧಿ ಮತ್ತು ವೀಕ್ಷಕರನ್ನು ಆಯ್ಕೆ ಮಾಡಿ ಕಳುಹಿಸಿಕೊಡುವಾಗ ಎಲ್ಲ ಜಿಲ್ಲೆಗಳಿಂದಲೂ ಕೃಷಿ ಕೂಲಿಗಾರ್ರರ ಪ್ರತಿನಿಧಿಗಳನ್ನೂ ಕಳುಹಿಸಿಕೊಡಲು ವಿಶೇಷ ಗಮನ ಹರಿಸಬೇಕು. ಪ್ರತಿನಿಧಿ ಶುಲ್ಕ ರೂಪಾಯಿ ಐದು ಕೊಡಬೇಕು. ಸಮ್ಮೇಳನಕ್ಕೆ ಬರುವಾಗ ಸದಸ್ಯತ್ವದ ಪೂರ್ಣ ವಿವರ, ರಶೀದಿ ಪುಸ್ತಕ ಮತ್ತು ರಾಜ್ಯ ಸಮಿತಿಗೆ ಕೊಡಲು ಬಾಕಿ ಇರುವ ಸದಸ್ಯತ್ವದ ಹಣವನ್ನು ಕಡ್ಡಾಯವಾಗಿ ತೆಗೆದುಕೊಂಡು ಬರಲೇಬೇಕು. ಸದಸ್ಯತ್ವದ ಪೂರ್ಣ ವಿವರ ಮತ್ತು ಚಂದಾ ಪಾವತಿ ಮಾಡದೆ ಪ್ರತಿನಿಧಿಗಳಾಗಿ ಭಾಗವಹಿಸುವುದು ಸಾಧ್ಯವಿಲ್ಲ.

ಕಳೆದ ಎರಡು ಮೂರು ವರ್ಷಗಳಲ್ಲಿ ರಾಜ್ಯದಾದ್ಯಂತ ನಡೆದಿರುವ ರೈತರ ಹೋರಾಟ ಮತ್ತು ಅನುಭವದ ಹಿನ್ನೆಲೆಯಲ್ಲಿ ಸೇರುವ ರಾಜ್ಯ ಸಮ್ಮೇಳನವು ಬಹಳ ಮಹತ್ವದ್ದಾಗಿದೆ. ರೈತರ ಮತ್ತು ಕೃಷಿ ಕೂಲಿಗಾರರ ಸಂಘಟನೆಗಳನ್ನು ರಾಜ್ಯದಾದ್ಯಂತ ಬಲಿಷ್ಠವಾಗಿ ಬೆಳೆಸುವುದು ಮತ್ತು ಮುಂಬರುವ ದಿನಗಳಲ್ಲಿ ಸಂಘಟಿತ ಹೋರಾಟಗಳನ್ನು ಹೆಚ್ಚಿಸುವುದು ಮತ್ತು ಇವೆಲ್ಲವನ್ನೂ ಮಾಡುವುದು ಸಾಧ್ಯವಾಗುವಂತೆ ಮಾಡುವುದಕ್ಕಾಗಿ ಸಮರ್ಥ ಮುಖಂಡತ್ವವನ್ನು ರೂಪಿಸುವುದು-ಇವೆಲ್ಲವುಗಳ ದೃಷ್ಟಿಯಿಂದ ರಾಜ್ಯ ಸಮ್ಮೇಳನವು ಬಹಳ ಪ್ರಾಮುಖ್ಯವಾಗಿದೆ. ರಾಜ್ಯ ಸಮ್ಮೇಳನವನ್ನು ಯಶಸ್ವಿಗೊಳಿಸಲು ಎಲ್ಲರೂ ಶ್ರಮಿಸಬೇಕು:

11ನೇ ತಾರೀಕು ಸಂಜೆ 4 ಘಂಟೆಗೆ ಮುಳಬಾಗಿಲಿನಲ್ಲಿ ರಾಜ್ಯ ಸಮ್ಮೇಳನವು ಉದ್ಘಾಟಿಸಲ್ಪಡುವುದು. 14ರಂದು ಮಧ್ಯಾಹ್ನದ ಮೇಲೆ ಒಂದು ಘಂಟೆಗೆ ರೈತ, ಕೃಷಿ ಕೂಲಿಗಾರ ಮತ್ತು ಕಾರ್ಮಿಕರ ಬೃಹತ್ ಮೆರವಣಿಗೆ ಪ್ರಾರಂಭವಾಗಿ, 4ಗಂಟೆಗೆ ಬಹಿರಂಗ ಸಭೆ ನಡೆಯುವುದು. ಕಾಂ|ಆರ್. ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವ ಬಹಿರಂಗ ಸಭೆಯಲ್ಲಿ ಕೇರಳದ ಮಾಜಿ ಮುಖ್ಯಮಂತ್ರಿ ಕಾಂ| ಇ.ಕೆ. ನಾಯನಾರ್, ಅಖಿಲ ಭಾರತ ಕಿಸಾನ್ ಸಭಾದ ಪ್ರಧಾನ ಕಾರ್ಯದರ್ಶಿಗಳಾದ ಕಾಂ| ಚಾತುಣ್ಣಿ ಮಾಸ್ತರ್, ಉಪಾಧ್ಯಕ್ಷರಾದ ಕಾಂ| ಶಂಕರಯ್ಯ, ಕರ್ನಾಟಕ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಪಿ ರಾಮಚಂದ್ರ ರಾವ್ ಮತ್ತು ಅಧ್ಯಕ್ಷ ಕಾಂ| ಎಚ್. ಮುಗವಾಳಪ್ಪ ಮೊದಲಾದವರು ಭಾಷಣ ಮಾಡಲಿರುವರು. 14 ರಂದಿನ ಮೆರವಣಿಗೆಗೆ ಮತ್ತು ಬಹಿರಂಗ ಸಭೆಗಳಲ್ಲಿ ರಾಜ್ಯದ ಎಲ್ಲಾ ಕಡೆಗಳಿಂದ ರೈತ, ಕೃಷಿಕೂಲಿಗಾರ, ಕಾರ್ಮಿಕ, ವಿದ್ಯಾರ್ಥಿ ಯುವಜನ ಮತ್ತು ಮಹಿಳೆಯರು ಹಾಗೂ ಬುದ್ಧಿಜೀವಿಗಳು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸುವಂತೆ ಎಲ್ಲಾ ಘಟಕಗಳೂ ಶಕ್ತಿಮೀರಿ ಶ್ರಮಿಸಬೇಕು

ಸಮ್ಮೇಳನವು ಮುಳಬಾಗಿಲು ಬಸ್ ನಿಲ್ದಾಣದಲ್ಲೆ ಇರುವ ರಾಮ ಮಂದಿರದಲ್ಲಿ ಜರಗುವುದು. ಬೆಂಗಳೂರಿನಿಂದ ಮುಳಬಾಗಿಲಿಗೆ ಬೆಳಿಗ್ಗೆನಿಂದ ರಾತ್ರಿತನಕ ಬೇಕಾದಷ್ಟು ಕರ್ನಾಟಕ ರಸ್ತೆ ಸಾರಿಗೆ ಬಸ್ಸುಗಳೂ, ಖಾಸಗಿ ಬಸ್ಸುಗಳೂ ದೊರೆಯುತ್ತವೆ. ಪ್ರತಿನಿಧಿಗಳೂ, ವೀಕ್ಷರರೂ 11ರಂದು ಮಧ್ಯಾಹ್ನದೊಳಗೆ ಮುಳಬಾಗಿಲನ್ನು ಸೇರಬೇಕು. ಬೆಂಗಳೂರಿನಿಂದ ಮುಳಬಾಗಿಲು ಸುಮಾರು 65 ಮೈಲಿಗಳ ದೂರದಲ್ಲಿದ್ದು ಬಸ್ಸಿನಲ್ಲಿ 2ರಿಂದ 2 1/2 ತಾಸುಗಳ ಪ್ರಯಾಣ ಆಗುತ್ತದೆ. ಹಾಸಿಕೊಳ್ಳುವುದಕ್ಕೆ ಮತ್ತು ಹೊದ್ದುಕೊಳ್ಳಲು ಬಟ್ಟೆ ಬರೆ ತರಬೇಕು.

ಎಚ್. ಮುಗವಾಳಪ್ಪ
ಅಧ್ಯಕ್ಷರು

ಪಿ. ರಾಮಚಂದ್ರರಾವ್
ಪ್ರಧಾನ ಕಾರ್ಯದರ್ಶಿ

ಕರ್ನಾಟಕ ಪ್ರಾಂತ ರೈತ ಸಂಘ

ಬಂಡಾಯ ಸಾಹಿತ್ಯದ ವಿಚಾರ ಗೋಷ್ಠಿಗಳು

14-2-82ರ ಐಕ್ಯರಂಗದಲ್ಲಿ ರಾಯಚೂರಿನಲ್ಲಿ ನಡೆದ 3ನೇ ಬಂಡಾಯ ಸಾಹಿತ್ಯ ಸಮ್ಮೇಳನದ ಉದ್ಘಾಟನಾ ವರದಿಯನ್ನು ಪ್ರಕಟಿಸಿದ್ದೆವು. ಈ ವಾರ ಸಮ್ಮೇಳನದಲ್ಲಿ ನಡೆದ ವಿಚಾರ ಗೋಷ್ಠಿಗಳ ಕುರಿತು ಮತ್ತು ಸಮಾರೋಪ ಕಾರ್ಯಕ್ರಮದ ವರದಿ ಪ್ರಕಟಿಸುತ್ತಿದ್ದೇವೆ.

ವರದಿ :

ಗುಡಿಹಳ್ಳಿ ನಾಗರಾಜ

"ಸಾಹಿತ್ಯ ಮತ್ತು ರಾಜಕೀಯ ಚಿಂತನೆ" ಎಂಬ ವಿಷಯವಾಗಿ ಮೊದಲನೇ ವಿಚಾರಗೋಷ್ಠಿ ಏರ್ಪಡಿಸಲಾಗಿತ್ತು. ಸಾಹಿತ್ಯ ಮತ್ತು ಸ್ವಾಭಿಮಾನ ಚಳುವಳಿಗಳು ಎಂಬ ವಿಷಯವಾಗಿ ಶ್ರೀ ಎಸ್. ಗಣೇಶನ್ ಮಾತನಾಡುತ್ತ, ಮಹಾರಾಷ್ಟ್ರದ ಸತ್ಯಶೋಧಕ ಚಳುವಳಿಯಂತೆ, ಬಂಗಾಳ, ತಮಿಳುನಾಡುಗಳಲ್ಲಿ ಬ್ರಾಹ್ಮಣೇತರರು ಸಮಾನತೆಗಾಗಿ ನಡೆಸಿದ ಹೋರಾಟಗಳಂತೆಯಾಗಲಿ, ಕೇರಳದ ನಾರಾಯಣ ಗುರು, ಎ. ಕೆ. ಜಿ.ಯವರ ಹೋರಾಟದಂತೆ ಕರ್ನಾಟಕದಲ್ಲಿ ಯಾಕೆ ಸ್ವಾಭಿಮಾನ ಚಳುವಳಿಗಳು ಬೆಳೆಯಲಿಲ್ಲ ಎಂದು ಪ್ರಶ್ನಿಸಿದರು. ಸಮಾಜದ ವಸ್ತುನಿಷ್ಠ ದಾಖಲೆಯೇ ಸಾಹಿತ್ಯ ಎಂದವರು ಲೋಹಿಯಾವಾದ ಮತ್ತು ಸಾಹಿತ್ಯದ ಬಗ್ಗೆ ಮಾತನಾಡಿದ ಶ್ರೀ ಹ. ಸೋಮಶೇಖರ್. ಮಾರ್ಕ್ಸ್‌ವಾದ ಬರೀ ಆರ್ಥಿಕ ಸಿದ್ಧಾಂತ ಅಲ್ಲ; ಅದು ಸದಾ ಚಲನಶೀಲ ಯಾಕೆಂದರೆ ಅದು ಅಪೂರ್ಣ ಇರ್ತದೆ ಎಂದವರು ರಮಜಾನ ದರ್ಗಾ ಮಾರ್ಕ್ಸ್‌ವಾದ ಮತ್ತು ಸಾಹಿತ್ಯದ ಬಗ್ಗೆ ಮಾತನಾಡುತ್ತ. ಅಧ್ಯಕ್ಷತೆ ವಹಿಸಿದ್ದ ಬಿ. ಕೃಷ್ಣಮೂರ್ತಿಯವರು ಮಾತನಾಡುತ್ತ, ರಾಜಕೀಯವನ್ನು ರಾಜಕೀಯ ರಹಿತಗೊಳಿಸಿ ರಾಜಕೀಯ ಮಾಡಿದ್ದಾರೆ. ಕಲೆಗಾರ ವಾಸ್ತವ ಚೌಕಟ್ಟಿನಲ್ಲಿ ವಿಶ್ಲೇಷಿಸಿ ಕಲಾತ್ಮಕ ಕೃತಿ ಪೂರ್ಣತೆ ಪಡೆಯಬೇಕಾದರೆ ಸೈದ್ಧಾಂತಿಕ ಪೂರ್ಣತೆ ಇರಲೇಬೇಕು. ಬದ್ಧತೆ ಇಲ್ಲದ ಕೃತಿ ಕಳಪೆ ಆಗೇ ಆಗುತ್ತೆ. ಪ್ರಜ್ಞಾಪೂರ್ವಕ ಕಮಿಟ್‌ಮೆಂಟ್ ಇಲ್ಲದಾಗ ಬಿಕ್ಕಟ್ಟು ಉಂಟಾಗುತ್ತದೆ. ಆದ್ದರಿಂದ ಬದ್ಧತೆ, ಕಮಿಟ್‌ಮೆಂಟ್ ಅನಿವಾರ್ಯ ಎಂದರು. ಶ್ರೀನಿವಾಸ್ ಸಿರನೂರಕರ್ ಆಶಯ ಭಾಷಣ ಮಾಡಿದರು.

"ಭಕ್ತಿ ಪಂಥದ ಸ್ವರೂಪ" ವಿಚಾರ ಗೋಷ್ಠಿಯನ್ನು ಉದ್ಘಾಟಿಸಿದ ಶ್ರೀ ಗಂಗಾಧರ ಮೊದಲಿಯಾರ್ ಪ್ರಗತಿಪರ ಚಿಂತನೆಯ ದಾಖಲೆಯನ್ನು ಕಡೆಗಣಿಸಿ ಬರೀ ಭಕ್ತಿ, ಮುಕ್ತಿಯ ಪಂಥವನ್ನು ವೈಭವೀಕರಿಸಿ ಬರೆಯುವ ಚರಿತ್ರೆಯನ್ನು ಸುಡಬೇಕು ಎಂದರು. ಸಾಮಾಜಿಕ ಹೋರಾಟಕ್ಕೆ ವಚನ ಸಾಹಿತ್ಯ ತೊಡಗಿಸಿಕೊಂಡಂತೆ ದಾಸರು ತೊಡಗಿಸಿಕೊಳ್ಳಲಿಲ್ಲ. ಜಗತ್ತಿನ ವಾಸ್ತವಗಳೆಡೆ ಗಮನ ಹರಿಸದ ದಾಸ ಸಾಹಿತ್ಯ ಬರೀ ಸನಾತನ ತೃಪ್ತಿಯಾಯಿತು ಎಂದವರು ಕನ್ನಡ ದಾಸ ಸಾಹಿತ್ಯದ ನೆಲೆ ಕುರಿತು ಮಾತನಾಡಿದ ಶ್ರೀ ಶಾಮಸುಂದರ ಬಿದಿರಕುಂದಿಯವರು. ಭಕ್ತಿಪಂಥದ ಸಾಮಾಜಿಕ ಪ್ರಜ್ಞೆಯ ಬಗ್ಗೆ ಮಾತನಾಡಿದ ಭಕ್ತಿಯ ಅಮಲಿನಲ್ಲಿ ಬೀಳಿಸುವ ಭಕ್ತಿ ಪಂಥದಲ್ಲಿ ವಿಚಾರವಾದ ಅವರ ಮೂಲಭೂತ ದೃಷ್ಟಿಯಲ್ಲಿ ಇಲ್ಲದೇ ಇರೋದ್ರಿಂದ ಭಕ್ತಿಪಂಥ ಸಾಮಾಜಿಕ ಪ್ರಜ್ಞೆಯನ್ನು ತಪ್ಪುದಾರಿಯಲ್ಲಿ ಕೊಂಡೊಯ್ಯಿತು ಎಂದವರು ಶ್ರೀ ಸುಂದರಂ. ಭಾವುಕ ನೆಲೆಯಲ್ಲಿ ಮಾತ್ರ ಉಳಿಸಿಕೊಳ್ಳುವಂತಹ ಭಕ್ತಿ ಪಂಥಗಳು ಕಾಂಗ್ರೆಸ್, ಜನತಾ, ಲೋಹಿಯಾ ರಾಜಕೀಯ ಮಾದರಿಯಲ್ಲಿ ಪರ್ಯಾವಸಾನಗೊಳ್ಳುವವೇ ಎಂದು ಪ್ರಶ್ನಿಸಿದವರು ಶ್ರೀ ಎಂ. ಆರ್. ವಿಶ್ವನಾಥರೆಡ್ಡಿ. ಅಧ್ಯಕ್ಷತೆ ವಹಿಸಿದ್ದ ಶ್ರೀ ದೇವಯ್ಯ ಹರವೆಯವರು ಮಾತನಾಡುತ್ತ ನಿರಂಕುಶ ಪ್ರಭುತ್ವ, ಬರ್ಬರತೆ ಇವೆಲ್ಲವನ್ನು ಭಕ್ತಿಪಂಥದ ಹಿನ್ನೆಲೆಯಲ್ಲಿ ಅವಲೋಕಿಸಬೇಕು. ವಿಶ್ವವಿದ್ಯಾಲಯದಲ್ಲಿ ಭಕ್ತಿಪಂಥದ ಪುಸ್ತಕಗಳನ್ನು ಪುನರ್‌ಮೌಲೀಕರಿಸಬೇಕೆಂದರು. ಅಲ್ಲಮಪ್ರಭು ಬೆಟ್ಟದೂರ ಗೋಷ್ಠಿಯ ಆಶಯ ಭಾಷಣ ಮಾಡಿದರು.

"ನಾನೊಬ್ಬ ಬಂಡಾಯಗಾರ್ತಿ, ಸಾಹಿತಿಯಲ್ಲ. ಸಾಹಿತಿಗಳಾದ ನಿಮ್ಮ ಲೇಖನಿ ಖಡ್ಗಕ್ಕಿಂತ ಹರಿತವಾದುದು. ಹಿಂದೆ ಒಂದು ಕಾಲದಲ್ಲಿ ಸ್ತ್ರೀಯೇ ಯಜಮಾನತಿಯಾಗಿದ್ದಳು. ಖಾಸಗಿ ಒಡೆತನದೊಂದಿಗೆ ಹೆಣ್ಣನ್ನು ಭೋಗ ವಸ್ತುವಾಗಿ ಮಾಡಿಕೊಂಡ ಗಂಡಸು ಅವಳನ್ನು ಮಕ್ಕಳನ್ನು ಹೆರುವ ಯಂತ್ರವನ್ನಾಗಿ ಮಾಡಿದ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸ್ತ್ರೀ ಶೃಂಗಾರದ ವಸ್ತುವಾಗಿದ್ದಾಳೆ ಆದರೆ ಇಂದಿನ ಮಹಿಳೆ ಎಚ್ಚೆತ್ತು ಸಾಮಾಜಿಕ ಆಗುಹೋಗುಗಳ ಬಗ್ಗೆ, ಬದುಕಿನ ಬಗ್ಗೆ ಬರೆಯುತ್ತಿದ್ದಾಳೆ" "ಮಹಿಳೆ ಮತ್ತು ಸಾಹಿತ್ಯ" ಗೋಷ್ಠಿಯನ್ನು ಉಧ್ಘಾಟಿಸಿದ ನಜಮಾ ಭಾಂಗಿ ಹೀಗೆ ನುಡಿದರು. ನಜಮಾಭಾಂಗಿ ಮಾತನಾಡಲುಎದ್ದಾಗ ಸಭಿಕರು ಚಪ್ಪಾಳೆ ತಟ್ಟಿದ್ದು ಪ್ರಜಾಸತ್ತಾತ್ಮಕ ಹೋರಾಟದಲ್ಲಿ ನಜಮಾ ಭಾಂಗಿಯವರ ಹೋರಾಟದ ಹಿನ್ನಲೆಯಲ್ಲಿ ಗಮನಾರ್ಹ ಅಂಶ. ಸಾಹಿತ್ಯದಲ್ಲಿ ಮಹಿಳೆಯ ಅರಿವಿನ ಸ್ಫೋಟದ ಕುರಿತು ಮಾತನಾಡಿದ ಡಿ. ವಿಜಯ ಅವರು, ಮಹಿಳೆ ಕೀಳು ಎನ್ನುವುದು ಜೈವಿಕ ಅಂಶದಲ್ಲಿ ಬೆರೆತಿಲ್ಲ. ಇದಕ್ಕೆ ಕಾರಣ ಪರಿಸರ ಇತಿಹಾಸ. ಮಹಿಳೆಯರಲ್ಲಿ ಅರಿವಿನ ಸ್ಫೋಟ ನೋವು, ಹತಾಶೆಗಿಂತ ಮುಂದೆ ಹೋಗಿಲ್ಲ. ಆದರೆ ಪ್ರತಿಭಟನೆಯಾಗಿ ಬರಬೇಕು. ಯಾವ ಬಂಡವಾಳಶಾಹಿಯು ಕಾರ್ಮಿಕರ ಸಲುವಾಗಿ ದುಡಿದಿಲ್ಲ. ಯಾವ ಪುರೋಹಿತಶಾಹಿಯು ಜನರಿಗಾಗಿ ದುಡಿದಿಲ್ಲ. ಯಾವ ಗಂಡಸೂ ಹೆಂಗಸಿಗಾಗಿ ದುಡಿದಿಲ್ಲ. ಶತಮಾನಗಳು ಬದಲಾದರೂ ಸ್ತ್ರೀಯರ ವಿಷಯದಲ್ಲಿ ಶತಮಾನಗಳು ಬದಲಾವಣೆಯಾಗಿಲ್ಲ. ಕೆಲವರಾದರೂ ಲೇಖಕಿಯರು ಈ ಜವಾಬ್ದಾರಿ ಹೊರಬೇಕು. ಪುರುಷ ಪ್ರಧಾನ ಸಮಾಜದಲ್ಲಿ ಗಂಡಸರಿಗಾಗಿ, ಗಂಡಸಿನಿಂದ, ಗಂಡಸಿಗೋಸ್ಕರ ಸಾಹಿತ್ಯ ರಚನೆಯಾಗಿದೆ. ಕೆಳಜಾತಿ, ವರ್ಗದ ಮಹಿಳೆಯೊಬ್ಬಳು ಕನ್ನಡದಲ್ಲಿ ಶ್ರೇಷ್ಠ ಕಲಾಕೃತಿ ಕೊಟ್ಟಾಗ ಪ್ರಾತಿನಿಧಿಕ ಶ್ರೇಷ್ಠ ಕೃತಿಯಾಗುತ್ತೆ. ಇದನ್ನು ನಾನು ಕನ್ನಡದಲ್ಲಿ 'ಅಂತ್ಯೋದಯ' ಎಂದು ಕರೆಯುತ್ತೇನೆ ಎಂದರು. ಮೇಲ್ಜಾತಿಯವರು ಕೆಳಜಾತಿಯವರನ್ನು ಮುಟ್ಟುವುದಿಲ್ಲ ಗಂಡಸು ಹೆಂಗಸನ್ನು ಮುಟ್ಟುವುದಿಲ್ಲ. ಈ ಜಾತಿ ಅಸ್ಪೃಶ್ಯತೆ, ಲಿಂಗ ಅಸ್ಪೃಶ್ಯತೆ ಸಾವಿರಾರು ವರ್ಷಗಳಿಂದ ನಡೆದುಕೊಂಡು ಬಂದಿದೆ. ಹೆಣ್ಣನ್ನು ಮುಟ್ಟದ ಸಂಸ್ಕೃತಿ ಮೂರು ಸಾವಿರ ವರ್ಷದ ಸಂಸ್ಕೃತಿ, ಮುಟ್ಟುವುದು ಜೀವನಕ್ಕೆ ಅವಶ್ಯವಾಗಿ ಬೇಕಾದ ಸಂಬಂಧ. ಗಂಡು ಹೆಣ್ಣು ಮುಟ್ಟಲಿಲ್ಲದಾಗ ನಾವು ಬೆಳೆಯೋದಿಲ್ಲ. ಆಗ ನಾವು ದಾಸರಾಗ್ತೇವಿ ಎಂದವರು 'ಇಂಡಿಯಾದ ಸಂಸ್ಕೃತಿಯಲ್ಲಿ ಸ್ತ್ರೀ' ವಿಷಯವಾಗಿ ಪ್ರಬಂಧ ಮಂಡಿಸಿದ ಶ್ರೀ ಪಿ. ರಾಮಮೂರ್ತಿ ಅಧ್ಯಕ್ಷತೆ ವಹಿಸಿದ್ದ ಬಿ. ಟಿ. ಲಲಿತಾನಾಯಕ ಮಾತನಾಡುತ್ತ ಉದ್ಧಾರಗಿದ್ಧಾರ ಅರ್ಥವಿಲ್ಲದ ಬೊಗಳೆ. ಮಹಿಳೆ ಎಲ್ಲ ಶೋಷಿತರ ವಿಮೋಚನೆಯ ಹೋರಾಟದಲ್ಲಿ ಪಾಲ್ಗೊಂಡು ತನ್ನ ವಿಮೋಚನೆ ಮಾಡಿಕೊಳ್ಳಬೇಕಿದೆ. ಈ ಅರ್ಥದಲ್ಲಿ ಮಹಿಳೆ ಬಂಡಾಯಗಾರ್ತಿಯಾಗಬೇಕಿದೆ ಎಂದರು. ಪ್ರಾರಂಭದಲ್ಲಿ ಶ್ರೀಮತಿ ಹರಿಣಿ ಕಕ್ಕೇರಿ ಆಶಯ ಭಾಷಣ ಮಾಡಿದರು.

"ಭಾಷೆ ಮತ್ತು ಸಾಮಾಜಿಕ ಸಂಬಂಧ" ವಿಚಾರಗೋಷ್ಠಿ ಉದ್ಘಾಟಿಸಿದ ಶ್ರೀ ಕಾಳೇಗೌಡ ನಾಗವಾರರು ಮಾತನಾಡುತ್ತ, ಜನರ ಭಾಷೆಯ ಬಳಕೆಗೆ ಪುರೋಹಿತಶಾಹಿ ಅವಕಾಶ ಕೊಟ್ಟಿಲ್ಲ. ಜನರ ಭಾಷೆಯಲ್ಲಿ ಸೃಜನಶೀಲತೆ ಸಾಧ್ಯ. ಇಂಡಿಯಾದವರು ಇಂಗ್ಲೀಷ್ ಬರ್ತ್ತತೆ ಅಂತ ತಿಳಕೊಂತೇವಿ. ಬೇರೆ ಭಾಷೆಯಲ್ಲಿ ಬರೀ ಅನುಕರಣೆ ಹಾಗೂ ನಕಲು. ಪ್ರಾಮಾಣಿಕವಾಗಿ ಸೃಜನಶೀಲತೆ ಕೊಡಲು ತೊಡಕು ಇಂಡಿಯಾದ ಇಂಗ್ಲೀಷ್ ಲೇಖಕರು ತೀರಾ ಕೆಳದರ್ಜೆಯ ಕೃತಿ ರಚಿಸಿದ್ದಾರೆ. ಭಾಷೆ ಕೂಡ ಮಹಿಳೆ ರೀತಿ ಇದೆ. ಆರಳತಕ್ಕಂತ ಪಾತ್ರ ಹೆಣ್ಣಿಗೆ ಹೆಚ್ಚಿದೆ. ಫಲಸಮೃದ್ಧಿಯಲ್ಲಿ ಗಂಡಿನದು ಗೌಣಪಾತ್ರ. ಇಡೀ ಸಾಹಿತ್ಯ ಗಂಡಸರು ಬರೆದದ್ದು. ಅರ್ಧ ಸಮಾಜ ಮಾತಾಡ್ತ ಇಲ್ಲ. ಜನಭಾಷೆ ಆಡಳಿತ ಭಾಷೆಯಾಗಬೇಕಾಗಿದೆ. ಸಂಸ್ಕೃತಕ್ಕೆ ಬದಲು ಉರ್ದುನಲ್ಲಿ ವಾರ್ತೆ ಕೇಳಿದರೆ ಹೆಚ್ಚು ಜನಕ್ಕೆ ಅರ್ಥ ಆಗುತ್ತೆ ಎಂದರು. ಮನುಷ್ಯ ಮಾತನಾಡುವುದನ್ನು ಕಲಿಯುವಾಗಲೇ ಶೋಷಣೆಯನ್ನು ತಂದ. ವೈಜ್ಞಾನಿಕ ಪರಿಕಲ್ಪನೆಗಳು ಭಾಷೆಯ ಬದುಕಿನ ಜತೆ ಬೆಳೆಯಬೇಕು. 'ಇಕ್ರಲಾ, ಒದೀರ್‍ಲಾ' ಆತ್ಮಾಭಿಮಾನದ ಶಬ್ದಗಳು ಎಂದವರು ಭಾಷೆಯ ಸಾಮಾಜಿಕ ಆಶಯದ

(7ನೇ ಪುಟ ನೋಡಿ)

ಸಮಾರೋಪ ಕಾರ್ಯಕ್ರಮ

ಸಮರೋಪ ಭಾಷಣ ಮಾಡಿದ ಶ್ರೀ ಚಂದ್ರಶೇಖರ ಪಾಟೀಲರು ಎರಡು ದಿನಗಳ ಒಟ್ಟು ವಿಚಾರಗೋಷ್ಠಿಗಳ ಬಗ್ಗೆ ಹೇಳುತ್ತಾ ಈ ರೀತಿ ಗೋಷ್ಠಿಗಳನ್ನು ನಾನು ಯಾವುದೇ ಸಾಹಿತ್ಯ ಸಮ್ಮೇಳನಗಳಲ್ಲಿ ನೋಡಿಲ್ಲ. ನಮ್ಮ ಹಿಂದಿನ ಎರಡು ಸಮ್ಮೇಳನಗಳಿಗಿಂತ ಈ ಸಮ್ಮೇಳನದಲ್ಲಿ ಗುಣಾತ್ಮಕ ಬದಲಾವಣೆ (qualitative change) ಆಗಿದೆ. ಕಲೆಗಾಗಿ ಕಲೆ ತುಂಬ ಹಳೆಯದಾಯ್ತು. ಸಮಾಜಕ್ಕಾಗಿ ಕಲೆ, ಸೈದ್ಧಾಂತಿಕ ಶಿಸ್ತು ಬೇಕು. ಪರಂಪರೆ ವಿರೋಧಿಗಳು ನಾವಲ್ಲ. ಸತತವಾಗಿ, ಜೀವಂತವಾಗಿ ಹರಿಯುವ ಪ್ರವಾಹದಲ್ಲಿ ನಾವು ಹೋಗೋರು. ಹಣ್ಣೆಲೆ ಉದುರಿದಾಗ ಹೊಸ ಎಲೆ ಚಿಗುರ ಬೇಕಾಗ್ತತಿ. ಪ್ರತಿಗಾಮಿಗೆ ಸಾಹಿತ್ಯ ಅಂದರೆ ಬರೀ ಅಕ್ಷರ ಪ್ರಪಂಚ. 'ಯಾವುದೇ ಸಿದ್ಧಾಂತ ಇದ್ದರೂ ಸಾಮಾಜಿಕ ವಾಸ್ತವಗಳಲ್ಲಿ ತರಬೇಕಾಗೇತಿ' (ref. ಬಿ.ಕೃಷ್ಣಮೂರ್ತಿ) ನಾವಿಂದು ನಮ್ಮ ಚರಿತ್ರೆ ಅರ್ಥಮಾಡಿಕೊಳ್ಳಲಿಕ್ಕೆ ಬೇಕಾದ ಪರಿಕರಗಳನ್ನು ಒದಗಿಸಿಕೊಳ್ಳಬೇಕಾಗಿದೆ. ಭಕ್ತಿ ಪಂಥದಲ್ಲಿ unquestioning obidience ಇದೆ. ಇವತ್ತಿನ ದಿವಸದಲ್ಲಿ ಅರಿವಿನ ಸ್ಫೋಟ ಆಗಬೇಕಿದೆ. ಬರೀ ಮಹಿಳೆಯ ಅರಿವಿನ ಸ್ಫೋಟ ಅಲ್ಲ. ಯಾರಿಗೆ ಎಂಗ ಬೇಕೋ ಅಂಗ ಹೋರಾಟ ಮಾಡ್ಲಿ ಅನ್ನೋದು ಹೋರಾಟದ ಸ್ವರೂಪ ಅಲ್ಲ. ಎಡಪಂಥೀಯರಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯ ಇದ್ದರೂ ಕೂಡ ನಾವು ಒಟ್ಟಾಗಿ ಹೋರಾಟ ಮಾಡಬೇಕು. ಸಿದ್ಧಾಂತದ clarity ಇಲ್ಲದಾಗ ಗೊಂದಲ ಉಂಟಾಗ್ತತೆ. ನಮ್ಮ ಕಾರ್ಯಕ್ರಮಗಳಿಗೆ ನಜಮಾಭಾಂಗಿ ಬಂದಿದ್ದು ತರ್ಕಬದ್ಧವಾದದ್ದು. ಬದಲಾವಣೆ ಅನಿವಾರ್ಯ. ನಮ್ಮ ನಮ್ಮ ಪರಿಮಿತಿ ಒಳಗ ಬಂಡಾಯದ ಸಾಧ್ಯತೆಗಳನ್ನು ಹೆಚ್ಚು ಮಾಡ್ಕೊಂತ ಹೋಗಬೇಕು. ಕಲೆ ಬರೀ ಒಳಗಿದ್ದುದು ಹೊರಾಗ ಬರೋದು ಅಲ್ಲ. ಭಾಷೆಗೆ ತನ್ನದೇ ಆದ Syntax ಇದೆ. ಇಲ್ಲಿ ಶ್ಯಾಣಾತನದ ಮಾತು ಹೇಳಬೇಕಾದ್ರ ಸ್ವಲ್ಪ ತಾಲೀಮು ಬೇಕಾಕ್ಕತಿ. ಸರಳತೆ, ಸಂಕ್ಷಿಪತೆ, ಸೂಚ್ಯತೆ ಮೈಗೂಡಿಸಿಕೊಳ್ಳಬೇಕು ಸೂಚ್ಯತೆ ಇರೋದ್ರಿಂದ ಧ್ವನಿ ಕೂಡಾ

(7ನೇ ಪುಟ ನೋಡಿ)

ಸಾಹಿತಿಗಳು ಬೀದಿಗಿಳಿದು ಪ್ರತಿಭಟಿಸಿದರು

ದೇವ್ರೊಲಿ, ಸಾಧುಪುರದಲ್ಲಿ ನಡೆದ ಕಗ್ಗೊಲೆಯ ವಿರುದ್ಧ ದಿನನಿತ್ಯ ದಲಿತರ ಮೇಲೆ ನಡೆಯುವ ಅತ್ಯಾಚಾರದ ವಿರುದ್ಧ ಪ್ರತಿಭಟಿಸಲು 7-2-82ರ ಭಾನುವಾರ ಬೆಳಿಗ್ಗೆ ರಾಯಚೂರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ತೆಗೆದರು. ಇದರಲ್ಲಿ ಸಮ್ಮೇಳನಕ್ಕೆ ಬಂದ ಎಲ್ಲ ಪ್ರತಿನಿಧಿಗಳೂ ರಾಯಚೂರಿನ SFI ಘಟಕ, ಸಮುದಾಯ ಘಟಕ, ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಗಳು ಭಾಗವಹಿಸಿದುವು. ದಲಿತರ ಮೇಲಿನ ಅತ್ಯಾಚಾರ ವಿರೋಧಿಸುವ, ಸಾಧುಪುರ, ದೇವ್ರೊಲಿ ಅತ್ಯಾಚಾರ ವಿರೋಧಿಸುವ ಬೆಲೆ ಏರಿಕೆ, ವರದಕ್ಷಿಣೆ, ಬಹುಪತ್ನಿತ್ವ ವಿರೋಧಿಸುವ, ಗೋಕಾಕ ವರದಿ ಅನುಷ್ಠಾನದ ಘೋಷಣೆಗಳು ಪ್ರಮುಖವಾಗಿದ್ದವು. ಸಾಹಿತಿಗಳು ಹೀಗೆ ಬೀದಿಗಿಳಿದು ಭಾಗವಹಿಸುತ್ತಿರುವುದು ಅನಿವಾರ್ಯವಾದ ಆಶಾದಾಯಕ ಬೆಳವಣಿಗೆ.

ಗೋಕಾಕ ವರದಿಯ ಸೂಕ್ಷ್ಮ ಪರಿಚಯ

1. ಸಂಸ್ಕೃತ,ಶಾಲಾ ಪಠ್ಯವಸ್ತುವಿನಲ್ಲಿ ಅಭ್ಯಾಸದ ವಿಷಯವಾಗಿ ಉಳಿಯಬೇಕೆ ?

2. ಉಳಿಯಬೇಕಾದರೆ ಕನ್ನಡಕ್ಕೆ ಪರ್ಯಾಯವಾಗದೆ ಉಳಿಸುವುದು ಹೇಗೆ ?

3. ತ್ರಿ ಭಾ ಷಾ ಸೂತ್ರದಂತೆ ಕನ್ನಡ ಕಡ್ಡಾಯ ಮಾಡಿ ಉಳಿದೆರಡು ಭಾಷಾ ಆಯ್ಕೆ ಸ್ವಾತಂತ್ರ್ಯವನ್ನು ವಿದ್ಯಾರ್ಥಿಗಳಿಗೆ ಬಿಡುವುದು ಸೂಕ್ತವೆ ?

ಇವು ಸಮಿತಿಗೆ ಪರಿಶೀಲನೆಗಾಗಿ ವಹಿಸಿದವಿಷಯಗಳು.

ಸಮಿತಿಯ ಸಲಹೆಗಳ ಸಾರಾಂಶ ಇಲ್ಲಿದೆ :

1. 1981–82ನೆಯ ಶೈಕ್ಷಣಿಕ ವರ್ಷದಿಂದಲೇ ಕನ್ನಡ ಭಾಷೆಯನ್ನು ಏಕೈಕ ಪ್ರಥಮ ಭಾಷೆಯನ್ನಾಗಿ ಮಾಡಿ ಅದು ಕಡ್ಡಾಯದ ವಿಷಯವಾಗಬೇಕು. ಅದಕ್ಕೆ 150 ಅಂಕಗಳಿರಬೇಕು. ಈ ವಿಷಯದಲ್ಲಿ ಒಂದು ತಾತ್ಕಾಲಿಕ ವ್ಯವಸ್ಥೆಯು ಅವಶ್ಯವಾಗಿದೆ. ಅದನ್ನು 8ನೆಯ ಸಲಹೆಯಲ್ಲಿ ಉಲ್ಲೇಖಿಸಲಾಗಿದೆ.

2. ಕೆಳಗೆ ಕಾಣಿಸಿದ ಭಾಷೆಗಳಲ್ಲಿ ಒಂದನ್ನು ದ್ವಿತೀಯ ಭಾಷೆಯಾಗಿ ಅಭ್ಯಸಿಸಬಹುದು ಅದಕ್ಕೆ 100 ಅಂಕಗಳು:

ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾತಿ, ಹಿಂದೀ, ಉರ್ದು ಹೀಗೆ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದು ಇಲ್ಲವೆ ಇಂಗ್ಲೀಷು, ಇಲ್ಲವೆ ಸಂಸ್ಕೃತ, ಅರೇಬಿಕ್, ಪರ್ಷಿಯನ್, ಲ್ಯಾಟಿನ್, ಗ್ರೀಕ್ ಈ ಪ್ರಾಚೀನ ಭಾಷೆಗಳಲ್ಲಿ ಒಂದು.

3. ಒಂದು ತೃತೀಯ ಭಾಷೆಯನ್ನೂ ತೆಗೆದುಕೊಳ್ಳಬೇಕಾಗುವುದು. ಅದಕ್ಕೆ 50 ಅಂಕಗಳು. ಮೇಲೆ 2ರಲ್ಲಿ ಕೊಟ್ಟ ಮಾಲಿಕೆಯಿಂದ ದ್ವಿತೀಯ ಭಾಷೆಯೆಂದು ಆಯ್ದುಕೊಂಡ ಭಾಷೆಯೊಂದನ್ನು ಬಿಟ್ಟು ಆ ಮಾಲಿಕೆಯಲ್ಲಿಯ ಬೇರೆ ಯಾವುದೊಂದು ಭಾಷೆಯನ್ನು ತೃತೀಯ ಭಾಷೆಯೆಂದು ತೆಗೆದುಕೊಳ್ಳಬಹುದು.

4. ತೃತೀಯ ಭಾಷೆಯು ಪರೀಕ್ಷೆಗೆ ಕಡ್ಡಾಯದ ವಿಷಯವಾಗಬೇಕು.

5. ದ್ವಿತೀಯ ಮತ್ತು ತೃತೀಯ ಭಾಷೆಗಳ ಮಾಲಿಕೆಗಳಲ್ಲಿ ಎಲ್ಲ ಭಾಷಾ ವರ್ಗಗಳೂ ಸೇರ್ಪಡೆಯಾಗುತ್ತವೆ. ಅಭ್ಯಸಿಸಲಿರುವ ಭಾಷೆಯು ಅರ್ವಾಚೀನವಿರಲಿ ಪ್ರಾಚೀನವಿರಲಿ ಉಳಿದ ಭಾಷಾ ವರ್ಗಗಳ ಮಟ್ಟಕ್ಕೆ ಅದರ ಮಟ್ಟವೂ ಸರಿಸಮವಾಗಿರಬೇಕು.

6. ಪ್ರತಿಭಾವಂತ ವಿದ್ಯಾರ್ಥಿಗಳ ಸುಪ್ತ ಚೇತನವನ್ನು ಉದ್ದೀಪಿಸುವ ಒಂದು ಆರೋಹಣ ಕ್ರಮವೂ ಅವಶ್ಯವಾಗಿದೆ: ಒಂದು ವಿಶಿಷ್ಟ ವಿಷಯ ಪರೀಕ್ಷೆಯನ್ನು ಈ ಉದ್ದೇಶದ ಸಲುವಾಗಿ ಏರ್ಪಡಿಸಲಾಗಿದೆ. ಈ ವಿಷಯಕ್ಕೆ 100 ಅಂಕಗಳು. ಆದರೆ 150 ಅಂಕಗಳಿದ್ದು ನಾಲ್ಕು ಭಾಷಾ ನೈಪುಣ್ಯಗಳು ವ್ಯಾಕರಣ ಹಾಗೂ ಉಳಿದ ಸಂಬಂಧಿಸಿದ ಅಂಕಗಳು. ಸಾಹಿತ್ಯಾಂಶಗಳು : ಈ ವೈವಿಧ್ಯದ ಪೂರ್ಣ ಅಭ್ಯಾಸವನ್ನು ಇಲ್ಲಿ 100 ಅಂಕಗಳಿಗಾಗಿಯೇ ರೂಪಿಸಿದೆ. ಇಂಗ್ಲೀಷು, ಕನ್ನಡ ಉಳಿದ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದು ಸಂಸ್ಕೃತ ಮೊದಲಾದ ಪ್ರಾಚೀನ ಭಾಷೆಗಳಲ್ಲಿ ಒಂದು : ಇವುಗಳಲ್ಲಿ ಯಾವುದೊಂದು ಭಾಷೆಯನ್ನು ಇಲ್ಲವೇ ಚಿತ್ರ ಕಲೆ, ಸಂಗೀತ, ನೃತ್ಯ ಇತ್ಯಾದಿಗಳಲ್ಲಿ ಒಂದು—ಈ ವಿಶಿಷ್ಟ ವಿಷಯ ಪರೀಕ್ಷೆಗಾಗಿ ತೆಗೆದುಕೊಳ್ಳಬಹುದು. ವಿದ್ಯಾರ್ಥಿಗಳು ಈ ವಿಷಯದಲ್ಲಿ ಪಡೆದ ಅಂಕಗಳನ್ನು ಎಸ್.ಎಸ್.ಎಲ್.ಸಿ.ಯ ಫಲಿತಾಂಶದಲ್ಲಿ ಸೇರಿಸಲಾಗುವುದಿಲ್ಲ. ಈ ವಿಷಯದ ಪರೀಕ್ಷೆಯನ್ನು ಎಸ್.ಎಸ್.ಎಲ್.ಸಿ. ಪರೀಕ್ಷೆಯ ಜೊತೆಯಲ್ಲಿಯೋ ಅಥವಾ ಅನಂತರವೋ ನಡೆಸಬಹುದು. ಇದರಲ್ಲಿ ಪ್ರತ್ಯೇಕ ಅರ್ಹತಾ ಪತ್ರವನ್ನು ಕೊಡಲಾಗುವುದು. ಈ ವಿಷಯದ ಮಟ್ಟ ಎಸ್. ಎಸ್. ಎಲ್. ಸಿ. ಗಿಂತ ಸ್ವಲ್ಪ ಮೇಲಿನದಾಗಿರುತ್ತದೆ ಇದು ಸ್ವಸಂತೋಷದ ಪರೀಕ್ಷೆ. ಈ ವಿಶಿಷ್ಟ ವಿಷಯವನ್ನು ಶಾಲೆಯಲ್ಲಿ ಕಲಿಸುವುದಿಲ್ಲ. ಅದನ್ನು ತೆಗೆದುಕೊಂಡ ವಿದ್ಯಾರ್ಥಿಗಳು ತಾವೇ ಸ್ವತಂತ್ರವಾಗಿ ಅದನ್ನು ಅಭ್ಯಸಿಸುತ್ತಾರೆ.

7. ಸಂಸ್ಕೃತವೂ 1981–82ನೆಯ ಶೈಕ್ಷಣಿಕ ವರ್ಷದಿಂದ ಪ್ರಥಮ ಭಾಷೆಯಾಗಿ ಉಳಿಯುವುದಿಲ್ಲ. ಎರಡನೆಯ ಹಾಗೂ ಮೂರನೆಯ ಸಲಹೆಯಲ್ಲಿ ಹೇಳಿದಂತೆ ಸಂಸ್ಕೃತವನ್ನು ದ್ವಿತೀಯ ಇಲ್ಲವೆ ತೃತೀಯ ಭಾಷೆಯಾಗಿ ಅಭ್ಯಸಿಸಬಹುದು.

8. ಮೊದಲನೆಯ ಸಲಹೆಯ ವಿಷಯದಲ್ಲಿ ತಾತ್ಕಾಲಿಕವಾಗಿ ಮಾಡಬೇಕಾದ ವ್ಯವಸ್ಥೆ.

(ಅ) ಕನ್ನಡೇತರ ವಿದ್ಯಾರ್ಥಿಗಳು ತಮ್ಮ ಶಾಲೆಗಳಲ್ಲಿ ಪ್ರಾಥಮಿಕ 3ನೆಯ ಕ್ಲಾಸಿನಿಂದ ಕನ್ನಡವನ್ನು ಕಲಿಯಬೇಕೆಂಬ ನಿಯಮ ಅಂಗೀಕೃತವಾಗಿದ್ದರೂ ಕನ್ನಡ ಶಿಕ್ಷಕರು ನೇಮಕವಾಗಿ ಅದಿನ್ನೂ ಜಾರಿಯಲ್ಲಿ ಬಂದಿಲ್ಲ. ಕಾರಣ ಮೊದಲನೆಯ ಸಲಹೆಯನ್ನು ಕನ್ನಡೇತರ ವಿದ್ಯಾರ್ಥಿಗಳನ್ನು ಕುರಿತು ಆಚರಣೆಗೆ ತರುವ ಪೂರ್ವದಲ್ಲಿ ಕೆಲವೊಂದು ವ್ಯವಸ್ಥೆಯನ್ನು ಮಾಡಬೇಕಾಗಿದೆ.

(ಆ) ಮೊತ್ತಮೊದಲು ಸರ್ಕಾರವು ಕನ್ನಡೇತರ ವಿದ್ಯಾರ್ಥಿಗಳ ಶಾಲೆಗಳಲ್ಲಿ ಕೂಡಲೆ, ಅಂದರೆ 1981-82ನೆಯ ಶೈಕ್ಷಣಿಕ ವರ್ಷದಿಂದ ಈ ವಿದ್ಯಾರ್ಥಿಗಳಿಗೆ ಪ್ರಾಥಮಿಕ 3ನೇ ಕ್ಲಾಸಿನಲ್ಲಿಕನ್ನಡ ಕಲಿಸಲು ಕನ್ನಡ ಶಿಕ್ಷಕರನ್ನು ನೇಮಿಸಬೇಕು,

(ಇ) 3ನೇ ಕ್ಲಾಸಿನಲ್ಲಿ ಕನ್ನಡ ಕಲಿತ ಈ ಕನ್ನಡೇತರ ವಿದ್ಯಾರ್ಥಿಗಳಿಗೆ ಪ್ರತಿ ವರ್ಷ ನಾಲ್ಕು ವರ್ಷಗಳವರೆಗೆ ಕನ್ನಡವನ್ನು ಕಡ್ಡಾಯವಾಗಿ ಕಲಿಸುತ ಹೋಗಬೇಕು :

1982–83 1983–84

1984–85 1985-86

ಹೀಗೆ 4, 5, 6, 7, ನೇ ಇಯತ್ತೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿತ ವಿದ್ಯಾರ್ಥಿಗಳು 1986-87ನೇ ವರ್ಷದಲ್ಲಿ 8ನೇ ಇಯತ್ತೆಯಲ್ಲಿ 150 ಅಂಕಗಳ ಕನ್ನಡವನ್ನು ಕಡ್ಡಾಯವಾಗಿ ಕಲಿಯಲು ಶಕ್ತರಾಗುವರು. ಮುಂದೆ 1982-83ರಿಂದ ಪ್ರಾಥಮಿಕ 3ನೇ ಇಯತ್ತೆಯಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಯುವ ವಿದ್ಯಾರ್ಥಿಗಳು ಇದೇ ದಾರಿಯನ್ನು ಅನುಸರಿಸುವರು.

(ಈ) 1986-87ರವರೆಗೆ ಕನ್ನಡೇತರ ವಿದ್ಯಾರ್ಥಿಗಳ 150 ಅಂಕಗಳ ಮಾತೃಭಾಷೆಯನ್ನು ಪ್ರಥಮ ಭಾಷೆಯಾಗಿ ಹಾಗೂ ಬರಿ 50 ಅಂಕಗಳ ಕನ್ನಡವನ್ನು ತೃತೀಯ ಭಾಷೆ ಇಲ್ಲವೆ 100 ಅಂಕಗಳ ಕನ್ನಡವನ್ನು ದ್ವಿತೀಯ ಭಾಷೆಯಾಗಿ ಕಲಿಯಬೇಕಾಗುವುದು.

(ಉ) 1986-87 ರಿಂದ ಎಲ್ಲ ವಿದ್ಯಾರ್ಥಿಗಳಿಗೂ 150 ಅಂಕಗಳ ಕನ್ನಡವು ಕಡ್ಡಾಯದ ಪ್ರಥಮ ಭಾಷೆಯಾಗುವುದು. ಕರ್ನಾಟಕ ರಾಜ್ಯದಲ್ಲಿ 10 ವರ್ಷ ಹಾಗೂ ಮೇಲ್ಪಟ್ಟು ನೆಲಸಿದ ಎಲ್ಲ ಮಕ್ಕಳಿಗೆ ಕನ್ನಡವು ಹೀಗೆ ಕಡ್ಡಾಯದ ವಿಷಯವಾಗುವುದು.

(ಊ) ಕನ್ನಡಿಗರಾದ ವಿದ್ಯಾರ್ಥಿಗಳಿಗೆ 1981-82ನೆಯ ಶೈಕ್ಷಣಿಕ ವರ್ಷದಿಂದ ಕನ್ನಡವು ಏಕೈಕ ಪ್ರಥಮ ಭಾಷೆಯಾಗಿ 150 ಅಂಕಗಳ ಕಡ್ಡಾಯದ ವಿಷಯವಾಗುತ್ತದೆ.

(ಋ) ಅಲ್ಲದೆ ಕನ್ನಡಿಗರಾದ ವಿದ್ಯಾರ್ಥಿಗಳಿಗೆ 1981-82ರಿಂದ ಕನ್ನಡವನ್ನು ಬಿಟ್ಟು ಉಳಿದೆಲ್ಲ ಭಾರತೀಯ ಭಾಷೆಗಳು ದ್ವಿತೀಯ ಹಾಗೂ ತೃತೀಯ ಭಾಷೆಗಳ ಅಂಕಣಗಳಲ್ಲಿ (ಕಾಲಂಗಳು) ಸಂಸ್ಕೃತ ಮೊದಲಾದ ಪ್ರಾಚೀನ ಭಾಷೆಗಳೊಡನೆ ಕಾಣಿಸಿಕೊಂಡು ಮುಂಬರುವ ಎಲ್ಲ ವರ್ಷಗಳಲ್ಲಿಯೂ ಅದೇ ರೀತಿಯಾಗಿ ಮುಂದುವರಿಯುವವು.

(ೠ) ಸಮಿತಿಯ 2ನೇ ಹಾಗೂ 3ನೇ ಸಲಹೆಗಳ ಪ್ರಕಾರ ಪ್ರಥಮ ಭಾಷೆಯಾದ ಕನ್ನಡವೊಂದನ್ನು ಬಿಟ್ಟು ಉಳಿದ ಯಾವ ಭಾಷೆಯನ್ನಾದರೂ ವಿದ್ಯಾರ್ಥಿಯು ದ್ವಿತೀಯ ಇಲ್ಲವೆ ತೃತೀಯ ಭಾಷೆಯಾಗಿ ತೆಗೆದುಕೊಳ್ಳಬಹುದು. ಆದರೆ ಈ ತಾತ್ಕಾಲಿಕ ವ್ಯವಸ್ಥೆಯಲ್ಲಿ ಇಂಗ್ಲೀಷನ್ನು 1985-86ನೆಯ ವರ್ಷ ಮುಗಿಯುವವರೆಗೆ ಬರಿ ದ್ವಿತೀಯ ಭಾಷೆಯೆಂದು ಅಭ್ಯಸಿಸಬಹುದು.

(ಎ) ಕನ್ನಡ, ಉಳಿದ ಆಧುನಿಕ ಭಾರತೀಯ ಭಾಷೆಗಳಲ್ಲಿ ಒಂದು (ತಮಿಳು, ತೆಲುಗು, ಮಲೆಯಾಳಂ, ಮರಾಠಿ, ಗುಜರಾಥಿ, ಹಿಂದೀ, ಉರ್ದು) ಹಾಗೂ ಸಂಸ್ಕೃತ ಇಲ್ಲವೆ ಇನ್ನೊಂದುಪ್ರಾಚೀನ ಭಾಷೆ (ಅರೇಬಿಕ್, ಪರ್ಷಿಯನ್, ಲ್ಯಾಟಿನ್, ಗ್ರೀಕ್) ಇವುಗಳಿದ್ದಲ್ಲಿ ಒಂದು ಭಾಷೆಯನ್ನು ತೃತೀಯ ಭಾಷೆಯೆಂದು ಆಯ್ದುಕೊಂಡು ಅಭ್ಯಸಿಸಬಹುದು. ಹೀಗೆ ಆಯ್ದುಕೊಂಡ ಭಾಷೆ 1981–82ರಿಂದಲೇ ಪರೀಕ್ಷೆಗೆ ಕಡ್ಡಾಯ ವಿಷಯವಾಗುವದು. ಇದೇ ವ್ಯವಸ್ಥೆ ಮುಂದೆಯೂ ನಡೆದುಕೊಂಡು ಬರುವುದು. 1986-87 ರಿಂದ ಕನ್ನಡವು ತೃತೀಯ ಭಾಷೆಗಳ ಪಟ್ಟಿಯಲ್ಲಿರುವುದಿಲ್ಲ. ಬದಲಾಗಿ ಆ ವರ್ಷದಿಂದ ಇಂಗ್ಲೀಷು ಆ ಪಟ್ಟಿಯಲ್ಲಿ ಸೇರುತ್ತದೆ.

9. ನೆರೆಹೊರೆಯ ರಾಜ್ಯಗಳಲ್ಲಿ ಕನ್ನಡಕ್ಕೆ ಪ್ರಾಥಮಿಕ ಶಿಕ್ಷಣಕ್ಕೂ ಸಹ ನ್ಯಾಯವಾಗಿ ದೊರೆಯಬೇಕಾದ ಮನ್ನಣೆಯಾಗಲಿ, ಪುರಸ್ಕಾರವಾಗಲಿ ದೊರೆಯುವುದೇ ಇಲ್ಲವೆಂಬ ದೂರು ಅಲ್ಲಿಯ ಕನ್ನಡಿಗರಿಂದ ಕೇಳಿ ಬರುತ್ತಿದೆ. ಅಲ್ಪ ಸಂಖ್ಯಾತರ ಭಾಷೆಗಳಲ್ಲಿ ಹೈಸ್ಕೂಲನ್ನು ಇಲ್ಲವೆ ಹೈಸ್ಕೂಲುಗಳಲ್ಲಿ ಅಲ್ಪ ಸಂಖ್ಯಾತರ ಭಾಷೆಗಳ ಅಭ್ಯಾಸಕ್ಕೆ ಮನ್ನಣೆ ಕೊಡುವ ವಿಷಯದಲ್ಲಿಯೂ ಈ ದೂರು ಕೇಳಬರುತ್ತದೆ. ಈ ವಿಷಯಗಳಲ್ಲೆಲ್ಲ ಕರ್ನಾಟಕದ ರಾಜ್ಯ ಸರ್ಕಾರ ತುಂಬ ಔದಾರ್ಯದಿಂದ ನಡೆದುಕೊಂಡು ಬಂದಿದೆ. ಆದರೆ ಇಂತಹ ಧೋರಣೆಯನ್ನು ಮುಂದುವರಿಸುವಾಗ ಕನ್ನಡಕ್ಕೂ ಅಂತಹ ಪುರಸ್ಕಾರ ನೆರೆಹೊರೆಯ ರಾಜ್ಯಗಳಲ್ಲಿ ದೊರೆತಿದೆಯೇ ಎಂದು ತಿಳಿದುಕೊಂಡು ಮುಂದುವರೆಯುವ ಸಮಯ ಬಂದಿದೆ. ಅಲ್ಲದೆ ಕನ್ನಡ ಜನತೆಯ ಮಕ್ಕಳಿಗೆ ಪ್ರಾಥಮಿಕ ಶಾಲೆಗಳನ್ನು ಕರ್ನಾಟಕದಲ್ಲಿ ಇನ್ನೂ ಎಲ್ಲಾ ಕಡೆ ಸ್ಥಾಪಿಸುವ ಕೆಲಸ ಮುಗಿಯದಿರುವಾಗ ಉಳಿದ ಭಾಷೆಗಳಿಗೆ ಅದಕ್ಕೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸುವದು ಸಾಧುವಲ್ಲ.

10. ಇಂಗ್ಲೀಷು ಮಾಧ್ಯಮವಿದ್ದ ಪ್ರಾಥಮಿಕ ಶಾಲೆಗಳಲ್ಲಿ ಸಹ ಮೂರನೇ ಕ್ಲಾಸಿನಿಂದ ಪ್ರಾರಂಭಿಸಿ ಪ್ರತಿಯೊಂದು ಇಯತ್ತೆಗೆ ಉಳಿದ ಭಾಷೆಗಳ ಮಾಧ್ಯಮವಿದ್ದ ಶಾಲೆಗಳಿರುವಂತೆಯೇ ಕನ್ನಡ ಕಲಿಸಿ ಪ್ರೌಢ ಶಾಲೆಗಳಲ್ಲಿ 8ನೇ ಕ್ಲಾಸಿನಿಂದ 10ನೇ ಕ್ಲಾಸ್ (ಅಂದರೆ ಎಸ್.ಎಸ್.ಎಲ್.ಸಿ.) ಮುಗಿಯುವವರೆಗೆ 150 ಅಂಕಗಳ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು.

[ಗೋಕಾಕ್ ವರದಿಗೆ ಸಂಬಂಧಪಟ್ಟ ಪಕ್ಷದ ಅಧಿಕೃತ ನಿಲುವನ್ನು ನಂತರ ಪ್ರಕಟಿಸಲಾಗುವುದು.]

ರಾಜ್ಯದಲ್ಲಿ ಗೋಕಾಕ್ ವರದಿಯ ಪರ ಹಾಗೂ ವಿರೋಧ ಅಭಿಪ್ರಾಯಗಳ ಗೊಂದಲವೇರ್ಪಟ್ಟಿದೆ. ನಾವು ಗೋಕಾಕ್ ವರದಿಯ ಸೂಕ್ಷ್ಮ ಪರಿಚಯವನ್ನು "ಐಕ್ಯರಂಗ" ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ. ಇವು ಗೋಕಾಕ್ ವರದಿಯ ಮುಖ್ಯಾಂಶಗಳು ಮಾತ್ರ.

ಕುಂದಾಪುರ ತಾಲ್ಲೂಕು ರೈತ ಸಮ್ಮೇಳನ

ದ. ಕ. ಜಿಲ್ಲೆಯ ಕುಂದಾಪುರದಲ್ಲಿ ತಾ|| 14-2-82 ರಂದು ಕುಂದಾಪುರ ತಾಲ್ಲೂಕು ರೈತ ಸಂಘದ ಸಮ್ಮೇಳನವು ಕಾಂ| ಶಿವರಾಮಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಜರಗಿತು.

ಪ್ರಾರಂಭದಲ್ಲಿ ಸಂಘದ ಕಾರ್ಯದರ್ಶಿಯವರಾದ ಕಾಂ| ಅಬ್ರಹಾಂ ಕರ್ಕಡರವರು ಕಳೆದ ಸಮ್ಮೇಳನದ ಅನಂತರ ನಡೆದ ರೈತ ಸಂಘದ ಚಟುವಟಿಕೆ ಹಾಗೂ ಚಳವಳಿಯ ವರದಿಯನ್ನು ಓದಿ ಹೇಳಿದರು. ವರದಿಯ ಮೇಲಿನ ಚರ್ಚೆಯಲ್ಲಿ ಗ್ರಾಮಾಂತರ ಪ್ರದೇಶಗಳಿಂದ ಬಂದ ರೈತ ಸಂಘದ ಪ್ರತಿನಿಧಿಗಳು ಹೆಚ್ಚಿನವರು ಭಾಗವಹಿಸಿ, ರೈತ-ಕೃಷಿ ಕೂಲಿಗಾರರ ಸಂಘಟನೆಯನ್ನು ವಿಸ್ತರಿಸಿ ಬೆಳೆಸಲು ಅಗತ್ಯವಾದ ಕಾರ್ಯಕ್ರಮಗಳನ್ನು ರೂಪಿಸಿ, ಚಳವಳಿಯನ್ನು ತೀವ್ರ ರೀತಿಯಲ್ಲಿ ನಡೆಸಬೇಕೆಂಬ ಅಭಿಪ್ರಾಯಗಳನ್ನು ಮುಂದಿಟ್ಟರು.

ದಕ್ಷಿಣ ಕನ್ನಡ ಜಿಲ್ಲಾ ಕಮಿಟಿಯ ಸಿನ ಕಾರ್ಯದರ್ಶಿಯವರಾದ ಕಾಂ||ಕೆ. ಶಂಕರ್‌ರವರು ಸಮ್ಮೇಳನಕ್ಕೆ ಶುಭ ಕೋರಿ ಮಾತನಾಡುತ್ತಾ, ಕೃಷಿ ಕೂಲಿಗಾರರ ಸಂಘಟನೆಯ ಮಹತ್ವವನ್ನು ವಿವರಿಸಿ, ರೈತರೂ ಕೃಷಿ ಕಾರ್ಮಿಕರೂ ಸಂಘಟಿತ ಚಳವಳಿ ನಡೆಸಬೇಕು ಎಂದು ಹೇಳಿದರು. ರೈತ-ಕೃಷಿಕೂಲಿಗಾರರು ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ನಡೆಯುವ ಇತರ ಜನ ವಿಭಾಗಗಳ

(ಏಳನೇಯ ಪುಟವನ್ನು ನೋಡಿ)

ವಿಜಯವಾಡದಲ್ಲಿ ನಡೆದ

ಲೇಖನಾಂಕ-1

ಇತ್ತೀಚೆಗೆ ವಿಜಯವಾಡದಲ್ಲಿ ಸಮಾಪ್ತಗೊಂಡ ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ದ ಹನ್ನೊಂದನೇ ಕಾಂಗ್ರೆಸ್ ರಾಷ್ಟ್ರದಪತ್ರಿಕಾರಂಗದ ಗಮನವನ್ನು ವ್ಯಾಪಕವಾಗಿ ಸೆಳೆದಿದೆ. ಪಕ್ಷದ ಅಧಿವೇಶನದ ದಿನಾಂಕವನ್ನು ಗೊತ್ತುಪಡಿಸಿದಾಗಿನಿಂದಲೂ ಪತ್ರಿಕೆಗಳಲ್ಲಿ ಅನೇಕ ಬಗೆಯ ಊಹಾಪೋಹಗಳೂ, ಪಕ್ಷದಲ್ಲೆಲ್ಲಾದರೂ ಒಡಕು ಕಾಣಿಸಿಕೊಂಡಿದೆಯೇ ಎಂದು ಕಂಡುಹಿಡಿಯಲು ಪತ್ರಿಕಾರಂಗ ತೀರಾ ಕುತೂಹಲಿಯಾಗಿದ್ದದ್ದೂ ಕಂಡುಬಂದಿತ್ತು. ಅಧಿವೇಶನ ಕಳೆದ ಬಳಿಕ ಈ ಪತ್ರಿಕೆಗಳಿಗೆಲ್ಲ ತುಂಬಾ ನಿರಾಸೆಯಾಗಿರುವುದು ಸಹಜ. ಕೆಲವು ಪತ್ರಿಕೆಗಳಂತೂ ನಮ್ಮ ಪಕ್ಷ ಸೋವಿಯತ್ ಒಕ್ಕೂಟದ ಕಡೆಗೆ ಎಷ್ಟು ವಾಲಿದೆಯೆಂಬುದನ್ನು ಕಂಡುಹಿಡಿಯಲು ಈ ವಾಲುವಿಕೆಯ ಕೋನವನ್ನು ಅಳತೆ ಮಾಡುವುದರಲ್ಲೇ ನಿರತವಾಗಿದ್ದವು. ನಮ್ಮ ಪಕ್ಷ ರಷಿಯಾ ಮತ್ತು ಚೀನಾ ಇವುಗಳೆರಡನ್ನೂ ಸಮಾನ ದೂರದಲ್ಲಿರಿಸಿಕೊಂಡಿತ್ತೆಂದೂ ಹನ್ನೊಂದನೇ ಅಧಿವೇಶನದಲ್ಲಿ ನಾವು ಈ ನಿಲುವೆಯನ್ನು ಕೈಬಿಟ್ಟದ್ದೇವೆಂದೂ ಕೆಲವು ಪತ್ರಿಕೆಗಳು ಗೋಳಾಡಿದ್ದೂ ಇದೆ. ಇನ್ನೂ ಕೆಲವು ಪತ್ರಿಕೆಗಳು 'ಅನಾರೋಗ್ಯದಿಂದ ಬಳಲುತ್ತಿರುವ' ನಮ್ಮ ಮುಂದಾಳುಗಳ ಬಗೆಗೆ ಅನುತಾಪ ವ್ಯಕ್ತಪಡಿಸಿ ಯುವ ಕಾರ್ಯಕರ್ತರು ಮುಂದೆ ಬಂದು ಪಕ್ಷದ ಮುಖಂಡತ್ವ ವಹಿಸಲೆಂದೂ ಹಾರೈಸಿದ್ದವು. ಒಬ್ಬ ವರದಿಗಾರರಂತೂ ಇವೆಲ್ಲಕ್ಕಿಂತ ತುಸು ಮುಂದೆ ಹೋಗಿ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷವು ತುರ್ತು ಪರಿಸ್ಥಿತಿಯ ಕಾಲದ ಸಿ. ಪಿ. ಐ. ಯಂತೆ 'ಮಹಾರಾಣಿಯ ವಿಧೇಯ ವಿರೋಧ ಪಕ್ಷ' ವಾಗಬಹುದೆಂದೂ ಶಂಕಿಸಿದ್ದರು.

ಮುಂದಿ ನಮ್ಮ ಈ ಎಲ್ಲಾ ದಸ್ತಾವೇಜುಗಳನ್ನು ಒಮ್ಮೆ ಪರಿಶೀಲಿಸಿ ನೋಡಲಿ. ಆಗಲಾದರೂ ಸಿ.ಪಿ.ಐ.(ಎಂ) ಕಾರ್ಮಿಕ ವರ್ಗದ ಅಂತಾರಾಷ್ಟ್ರೀಯತೆಯನ್ನು ಸದಾಕಾಲ ಎತ್ತಿ ಹಿಡಿದಿದೆಯೆನ್ನುವುದು ಅವರಿಗೆ ಗೊತ್ತಾದೀತು. ಹಾಂ! ಬೇರೆಯವರು ಈ ರೀತಿ ಬೇರೆ ಬೇರೆ ಹಂತದಲ್ಲಿ ವಿವಿಧಕಡೆಗೆ ವಾಲಿದ್ದರೆ ಈ ವಾಲುವಿಕೆಯ ಕೋನ ಎಷ್ಟು ಎನ್ನುವುದನ್ನು ಧಾರಾಳವಾಗಿ ಅಳತೆ ಮಾಡಲಿ. ಅದು ಬಿಟ್ಟು ಪೀಸಾ ನಗರದ ಗೋಪುರ ವಾಲುತ್ತಿದ್ದರೆ 'ಅಯ್ಯೋ ಪ್ರಪಂಚವೇ ವಾಲುತ್ತಿದೆ'ಯೆನ್ನುವುದು ಮಾತ್ರ ಸರಿಯಲ್ಲ.

ಜಗತ್ತಿನ ಕಮ್ಯುನಿಸ್ಟ್ ಪಕ್ಷಗಳು ಎಂತಹ ಸೈದ್ಧಾಂತಿಕ ನಿಲುವೆಗಳನ್ನು ಅಂಗೀಕರಿಸಬೇಕೆಂದು ನಾವು ಬಯಸಿದ್ದೆವೋ ವಾಸ್ತವವಾಗಿ ಅದೇ ನಿಲುವೆಯನ್ನು ಸಾಮ್ರಾಜ್ಯಶಾಹಿಯ ಅಪಾಯ

ಪ್ರಥಮ ಸಮಾಜವಾದಿ ರಾಷ್ಟ್ರ ಹಾಗೂ ಅದರೊಂದಿಗೇ ಇಡೀ ಸಮಾಜವಾದಿ ಬಣ ಅಮೇರಿಕನ್ ಸಾಮ್ರಾಜ್ಯಶಾಹಿಯ ಕಾಲ್ತುಳಿತಕ್ಕೆ ಸಿಕ್ಕಿ ಧೂಳೀಪಟವಾಗುತ್ತಿತ್ತೆಂಬುದರಲ್ಲಿ ಸಂದೇಹವಿಲ್ಲ. ಇಂದಿಗೂ ಪಶ್ಚಿಮ ಯುರೋಪಿನ ಅನೇಕ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಅಮೇರಿಕಾ ಹೇಳಿದುದಕ್ಕೆಲ್ಲಾ ತಲೆಯಾಡಿಸದೇ ಇದ್ದರೆ ಅದಕ್ಕೆ ಸೋವಿಯತ್ ಒಕ್ಕೂಟದ ವಿರುದ್ಧ ಯೂರೋಪಿನಲ್ಲಿ ಯುದ್ಧಮಾಡಿ ಗೆಲ್ಲುವುದು ತಮಗೆ ಸಾಧ್ಯವಿಲ್ಲವೆನ್ನುವ ಅರಿವು ಅವುಗಳಿಗೆ ಉಂಟಾಗಿರುವುದೇ ಕಾರಣ. ಕಳೆದ ವಿಶ್ವಸಂಗ್ರಾಮದ ಬಳಿಕ ಯೂರೋಪಿನ ಅನೇಕ ರಾಷ್ಟ್ರಗಳು ಜನತಾ ಪ್ರಜಾಪ್ರಭುತ್ವ ರಾಷ್ಟ್ರಗಳಾಗಿ ಮಾರ್ಪಾಟು ಹೊಂದಿರುವುದನ್ನು ಅವು ಮರೆತಿಲ್ಲ. ಈಗ ಸೋವಿಯತ್ ರಶ್ಯಾ ಶಾಂತಿಯುತ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ

ಆದರೆ ಸುಮಾರು ಎರಡು ದಶಕಗಳ ಹಿಂದೆಯೇ ವಿಜಯವಾಡದಲ್ಲೇ ಜರುಗಿದ್ದ ಅವಿಭಜಿತ ಕಮ್ಯೂನಿಸ್ಟ್ ಪಕ್ಷದ ಆರನೇ ಅಧಿವೇಶನದಲ್ಲಿ ಈಗ ನಮ್ಮ ಪಕ್ಷದಲ್ಲಿರುವ ನಮ್ಮ ಅನೇಕ ಸಂಗಾತಿಗಳು ಯಾವ ನೀತಿಗಳಿಗಾಗಿ ಹೋರಾಡಿದ್ದರೊ ಅದೇ ಧೋರಣೆಗಳಿಗೆ ಇಂದು ಯಶಸ್ಸು ದೊರೆತಿದೆ ಮತ್ತು ಅವುಗಳ ಸಿಂಧುತ್ವವು ರುಜುವಾತಾಗಿದೆಯೆನ್ನುವುದನ್ನು ಮಾತ್ರ ಯಾವ ಪತ್ರಿಕೆಗಳೂ ಗಮನಿಸಲಿಲ್ಲ.

ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಅಂತರ್ರಾಷ್ಟ್ರೀಯತೆಯ ನೀತಿಯನ್ನು (proletarian internationalism) ಕಟ್ಟು ನಿಟ್ಟಾಗಿ ಪಾಲಿಸಿಕೊಂಡು ಬಂದಿದೆ. ಅದು ಯಾವುದೇ ಜಾಗತಿಕ ಕೇಂದ್ರದ ಹಿಂಬಾಲಕನಾಗಿಲ್ಲ. ಸೋವಿಯತ್ ಕಮ್ಯೂನಿಸ್ಟ್ ಪಕ್ಷವಾಗಲೀ ಚೀನೀ ಕಮ್ಯೂನಿಸ್ಟ್ ಪಕ್ಷವಾಗಲೀ ಸರಿಯಾದ ಸೈದ್ಧಾಂತಿಕ ನಿಲುವೆಗಳಿಂದ ದೂರ ಸರಿದಾಗ ಸಿ.ಪಿ.ಐ. (ಎಂ) ಅವುಗಳನ್ನು ನಿರ್ದಾಕ್ಷಿಣ್ಯವಾಗಿ ಟೀಕಿಸಿದೆ. ಕಾರ್ಮಿಕ ವರ್ಗದ ಅಂತರ್ರಾಷ್ಟ್ರೀಯತೆಗೆ ಲೆನಿನ್ ನೀಡಿರುವ ಈ ಕೆಳಗಿನ ನಿರೂಪಣೆಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ಬದ್ಧವಾಗಿದೆ :

"ಅಂತರ್ರಾಷ್ಟ್ರೀಯತೆ ಒಂದು ಮತ್ತು ಕೇವಲ ಒಂದೇಸ್ವರೂಪದ್ದಾಗಿದೆ. ತಮ್ಮ ಸ್ವಂತ ದೇಶಗಳಲ್ಲಿ ಕ್ರಾಂತಿಕಾರಿ ಚಳುವಳಿಯ ವಿಕಸನ ಮತ್ತು ಕ್ರಾಂತಿಕಾರಿ ಹೋರಾಟಗಳಿಗಾಗಿ ಮನಃಪೂರ್ವಕವಾಗಿ ದುಡಿಯುವುದು ಹಾಗೂ ಯಾವ ದೇಶವನ್ನು ಹೊರತು ಪಡಿಸದೆ ಎಲ್ಲಾ ಕಡೆಗೂ ನಡೆಯುವ ಅಂತಹ ಹೋರಾಟಗಳಿಗೆ (ಪ್ರಚಾರ, ಸಹಾನುಭೂತಿ ಮತ್ತು ಭೌತಿಕ ಸರಕಾರ ನೀಡುವ ಮೂಲಕ) ಬೆಂಬಲ ನೀಡುವುದೇ ಅಂತಹ ಅಂತರ್ರಾಷ್ಟ್ರೀಯತೆ" ಎಂದಿದ್ದಾರೆ ಲೆನಿನ್.

ಸಿ. ಪಿ. ಐ. (ಎಂ) ಲೆನಿನ್ ಹೇಳಿರುವಂತಹ ಈ ಏಕಮಾತ್ರ ಅಂತರ್ರಾಷ್ಟ್ರೀಯತೆಯ ಧೋರಣೆಯಿಂದ ಸ್ವಲ್ಪವೂ ವಿಚಲಿತವಾಗಿಲ್ಲ. ನಮ್ಮ ದೇಶದ ಕ್ರಾಂತಿಕಾರಿ ಹೋರಾಟದ ಬಗೆಗೂ ನಮ್ಮ ಕಾಳಜಿ ಕಿಂಚಿತ್ತೂ ಕಡಿಮೆಯಾಗಿಲ್ಲ. ನಾವು 'ಶಾಂತಿಯುತ ಪರಿವರ್ತನೆ'ಯ ಮಾರ್ಗವನ್ನಾಗಲೀ 'ಬಂಡವಾಳಶಾಹಿಯಲ್ಲದ ಅಭಿವೃದ್ಧಿಯ ಪಥವನ್ನಾಗಲೀ (non-capitalist path of development) ಅಥವಾ ಮಾಸ್ಕೊ ಸಾರಿರುವಂತಹ 'ರಾಷ್ಟ್ರೀಯ ಪ್ರಜಾಪ್ರಭುತ್ವ' ವನ್ನಾಗಲೀ ಒಪ್ಪಿಕೊಳ್ಳಲು ಸಿದ್ದರಿಲ್ಲ. ಅಥವಾ ಬೀಜಿಂಗ್ ರೇಡಿಯೋ ಬಿತ್ತರಿಸುವಂತೆ ಭಾರತದ ಮೇಲೆ 'ಪರ್ವಕಾಲದ ಗುಡುಗು ಅಬ್ಬರಿಸುತ್ತಿದೆ'ಯೆಂದಾಗಲೀ 'ಹುಲ್ಲುಗಾವಲನ್ನು ದಹಿಸಿಬಿಡುವ ಕಿಡಿ ಹೊತ್ತಿಕೊಂಡಿದೆಯೆಂದಾಗಲೀ' ಎಂದೂ ಒಪ್ಪಿಕೊಂಡಿಲ್ಲ. ವಿಶ್ವದ ಎರಡು ಬೃಹತ್ ಕಮ್ಯೂನಿಸ್ಟ್ ಪಕ್ಷಗಳ ಮುಖಂಡತ್ವವನ್ನು ನಾವು ಟೀಕಿಸಿದ್ದೇವೆಂದ ಮಾತ್ರಕ್ಕೆ ನಾವು ಅವೆರಡೂ ಪಕ್ಷಗಳನ್ನು ಸಮಾನ ದೂರದಲ್ಲಿರಿಸಿಕೊಂಡಿದ್ದೇವೆನ್ನುವುದೂ ತಪ್ಪು. ಜಾಗತಿಕ ಕಮ್ಯೂನಿಸ್ಟ್ ಪಕ್ಷಗಳು 1957ರಲ್ಲಿ ಹೊರಡಿಸಿದ್ದ ಘೋಷಣೆ,1960ರ ಹೇಳಿಕೆಗಳುಮತ್ತು ಚೀನೀಕಮ್ಯೂನಿಸ್ಟ್ ಪಕ್ಷದ ಜೂನ್ 14ರ ಪತ್ರದ (ಸಾಮಾನ್ಯ ನೀತಿ) ಕ್ರಾಂತಿಕಾರಿ ತತ್ವಗಳಿಗೆ ನಾವು ಬದ್ಧರಾಗಿದ್ದೇವೆ. ಸೋವಿಯತ್ ಕಮ್ಯೂನಿಸ್ಟ್ ಪಕ್ಷ 1957ರ ಘೋಷಣೆ ಮತ್ತು 1960 ಹೇಳಿಕೆಗಳಿಂದ ದೂರ ಸರಿದಿದೆಯೆನ್ನುವುದೇ ನಾವು ಅದರ ಬಗ್ಗೆ ಮಾಡುತ್ತಿರುವ ಟೀಕೆಗಳಲ್ಲಿ ಮುಖ್ಯವಾದದ್ದು. ಸಾಮ್ರಾಜ್ಯಶಾಹಿಯು ವಿಶ್ವದ ಜನತೆಯ ಪ್ರಥಮ ಶತ್ರುವಾಗಿಯೇ ಉಳಿದಿದೆಯೆನ್ನುವ ಸತ್ಯಾಂಶವನ್ನು ಅಂಗೀಕರಿಸದಿರುವ ಮೂಲಕ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಈ ಹಿಂದಿನ 'ನವ ಪರಿಷ್ಕರಣವಾದಿ' ಮುಂದಾಳುಗಳು ಸಾಮ್ರಾಜ್ಯಶಾಹಿಗೆ ಶರಣಾಗಿದ್ದರು. ಸಾಮ್ರಾಜ್ಯಶಾಹಿಯು ಇತ್ತೀಚಿಗಿನ ದಿನಗಳಲ್ಲಿ ಅಷ್ಟೊಂದು ಪ್ರಭಾವಶಾಲಿಯಾಗಿಲ್ಲ ಮತ್ತು ಈ ರೀತಿ ದುರ್ಬಲವಾಗಿರುವ ಸಾಮ್ರಾಜ್ಯಶಾಹಿಯನ್ನು ಶಾಂತಿಯುತ ಸ್ಪರ್ಧೆಯ ಮೂಲಕವೂ ರಾಷ್ಟ್ರೀಯ ಸ್ವಾತಂತ್ರ್ಯಗಳಿಸಿರುವ ಅಥವಾ ಇನ್ನೂ ಪರತಂತ್ರವಾಗಿ ಉಳಿದಿರುವ ರಾಷ್ಟ್ರಗಳಲ್ಲಿ ಶಾಂತಿಯುತ ಪರಿವರ್ತನೆಗಳನ್ನುಂಟು ಮಾಡುವುದರಿಂದಲೂ ಸೋಲಿಸಲು ಸಾಧ್ಯವೆಂದು ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಅಭಿಮತ. ಈ ಧೋರಣೆಗನುಸಾರವಾಗಿ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಈ ಹಿಂದಿನ ನಾಯಕತ್ವ ಅನೇಕ ರಾಷ್ಟ್ರೀಯ ಹೋರಾಟಗಳಿಗೆ ನೆರವು ನೀಡಲೇ ಇಲ್ಲ. ಹೀಗೆ ವಿಶ್ವದ ಕಾರ್ಮಿಕವರ್ಗ ಚಳುವಳಿಯ ಪ್ರಮುಖ ನೇತಾರನಾಗಿ ಅದು ತಾನು ನಿರ್ವಹಿಸಬೇಕಾಗಿದ್ದ ಕರ್ತವ್ಯವನ್ನು ಕಡೆಗಣಿಸಿತ್ತು.

ವಿಯತ್ನಾಂನಲ್ಲಿ ಸಾಮ್ರಾಜ್ಯಶಾಹಿಗಳು ನಡೆಸುತ್ತಿದ್ದ ಹಸ್ತಕ್ಷೇಪವನ್ನು ಆರಂಭದ ದಿನಗಳಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷ ಸ್ಪಷ್ಟವಾಗಿ ಖಂಡಿಸಲು ಸಿದ್ಧವಿರಲಿಲ್ಲವೆನ್ನುವುದನ್ನು ಇಲ್ಲಿ ಸ್ಮರಿಸಬಹುದು. ಆ ಬಳಿಕ ಸೋವಿಯತ್ ಪಕ್ಷ ತನ್ನ ನಿಲುವನ್ನು ಸರಿಪಡಿಸಿ ಚೀನೀ ಕಮ್ಯುನಿಸ್ಟ್ ಪಕ್ಷದೊಂದಿಗೆ ಐಕ್ಯ ಕಾರ್ಯಾಚರಣೆಗೆ ಮುಂದಾಯಿತು. ಆದರೆ ಈ ವೇಳೆಗಾಗಲೆ ಚೀನೀ ಕಮ್ಯುನಿಸ್ಟ್ ಪಕ್ಷ ತನಗೆ ಸೋವಿಯತ್ ಕಮ್ಯುನಿಸ್ಟ್ ಪಕ್ಷದ ಜೊತೆಗೆ ಯಾವುದೇ ಸಂಬಂಧವಿಲ್ಲವೆಂಬ ನೆಪವೊಡ್ಡಿ ಅಂತಹ ಐಕ್ಯ ಕಾರ್ಯಾಚರಣೆಗೆ ಸಹಕಾರ ನೀಡಲಿಲ್ಲ.

ಇದಕ್ಕಾಗಿ ನಮ್ಮ ಪಕ್ಷ 1968 ರಷ್ಟು ಹಿಂದೆಯೇ ಚೀನೀ ಕಮ್ಯುನಿಸ್ಟ್ ಪಕ್ಷವನ್ನು ನಿರ್ದಾಕ್ಷಿಣ್ಯವಾಗಿ ಖಂಡಿಸಿದೆ. ಹಾಗೆಯೇ 1968ರಲ್ಲಿ ಜೆಕೊಸ್ಲೊವಾಕಿಯಾದ ಪ್ರಶ್ನೆಯಲ್ಲಿ ಸೋವಿಯತ್ ರಶ್ಯಾ ಮಧ್ಯೆ ಪ್ರವೇಶಿಸಿದಾಗ ನಾವದನ್ನು ಸ್ವಾಗತಿಸಿದ್ದೇವೆ. ಸಿ.ಪಿ.ಐ. (ಎಂ) ಸೋವಿಯತ್ ಒಕ್ಕೂಟದತ್ತ ಎಷ್ಟು ಡಿಗ್ರಿಗಳಷ್ಟು ವಾಲಿದೆಯೆನ್ನುವ ಲೆಕ್ಕಾಚಾರದಲ್ಲೇ ತಲೆಕೆಡಿಸಿಕೊಳ್ಳುವವನ್ನೆದುರಿಸುವ ತನ್ನ ಪ್ರಯತ್ನಗಳಲ್ಲಿ ಸೋವಿಯತ್ ಕಮ್ಯುನಿಸ್ಟ್ ಪಕ್ಷವು ಹಂತ ಹಂತವಾಗಿ ಕೈಗೊಂಡಿರುವುದನ್ನು ಕಾಣಬಹುದು. ಸೈದ್ಧಾಂತಿಕ ಪ್ರಶ್ನೆಗಳ ಬಗ್ಗೆ 1968ರಲ್ಲಿ ನಾವು ಅಂಗೀಕರಿಸಿದ್ದ ನಿಲುವೆಯನ್ನು (Stand on Idiological issues) ಮತ್ತೊಮ್ಮೆ ಪರಿಶೀಲಿಸಿದರೆ ಇದು ಗೊತ್ತಾಗುತ್ತದೆ. ಕ್ರುಶ್ಚೇವ್ ಪ್ರತಿಪಾದಿಸಿದ್ದ ದೋಷಯುಕ್ತ ಹಾಗೂ ಪರಿಷ್ಕರಣವಾದಿ ನಿಲುವನ್ನು ಸಿ.ಪಿ.ಎಸ್.ಯು ಈ ತನಕ ಬಹಿರಂಗವಾಗಿ ಮಾರ್ಪಡಿಸಿಕೊಳ್ಳದಿದ್ದರೂ ಜೆಕೊಸ್ಲೊವಾಕಿಯಾದಿಂದ ತೊಡಗಿ ವಿಯೆತ್ನಾಂ, ಅಂಗೋಲಾ, ಇಥಿಯೋಪಿಯಾ ಮತ್ತು ಅಫಘಾನಿಸ್ತಾನಗಳವರೆಗೆ ಸೋವಿಯತ್ ರಶ್ಯಾ ಕೈಗೊಂಡ ಕ್ರಮಗಳು ತನ್ನ ಅಂತಾರಾಷ್ಟ್ರೀಯ ಹೊಣೆಗಾರಿಕೆಯನ್ನು ಅದು ಹೇಗೆ ಸಿರ್ವಹಿಸಬೇಕೆಂದು ನಾವು ಬಯಸಿದ್ದೆವೋ ಅದಕ್ಕೆ ಅನುಗುಣವಾಗಿಯೇ ಅದು ನಿಭಾಯಿಸಿದೆ. ನಾವು ಸೋವಿಯತ್ ಪಕ್ಷವನ್ನು ಟೀಕಿಸಿದ್ದ ಕಾಲಕ್ಕೆ ಅದು ಶಾಂತಿಯುತ ಸಹಬಾಳ್ವೆ, ಶಾಂತಿಯುತ ಸ್ಪರ್ಧೆ ಮತ್ತು ಶಾಂತರೀತಿಯ ಪರಿವರ್ತನೆಯ ಪರಿಷ್ಕರಣವಾದಿ ಸಿದ್ಧಾಂತಗಳನ್ನು ಪ್ರತಿಪಾದಿಸುತಿತ್ತು. ಅದು ಶಾಂತಿಯ ಒಣಮಂತ್ರವನ್ನು ಪಠಿಸುತ್ತಾ ಸಾಮ್ರಾಜ್ಯಶಾಹಿಯು ತನ್ನ ವರ್ತನೆಯನ್ನು ಬದಲಾಯಿಸುವುದೆಂಬ ಆಶಯ ಹೊಂದಿತ್ತು. ಆದರೆ ರಾಷ್ಟ್ರೀಯ ವಿಮೋಚನಾ ಸಮರಗಳ ರಂಗಭೂಮಿಯಲ್ಲಿ ಸಾಮ್ರಾಜ್ಯಶಾಹಿಗಳು ಸಡ್ಡು ಹೊಡೆದು ನಿಂತಾಗ ಸೋವಿಯತ್ ರಶ್ಯಾ ಸೋಲೊಪ್ಪಿಕೊಳ್ಳುವುದಿಲ್ಲವೆನ್ನುವುದನ್ನು ಅದೀಗ ತೋರಿಸಿಕೊಟ್ಟಿದೆ. ಹಾಗೆಯೇ ಸಾಮ್ರಾಜ್ಯಶಾಹಿ ಬಣವು ತನ್ನ ಸೈನಿಕ ಶಕ್ತಿಯನ್ನು ಅಳತೆಮೀರಿ ಬೆಳೆಸಿಕೊಳ್ಳುತ್ತಿರುವುದರ ಕಡೆಗೆ ಸೋವಿಯತ್ ರಶ್ಯಾ ಕಣ್ಣುಮುಚ್ಚಿ ಕುಳಿತಿದ್ದರೆ ಈ ವೇಳೆಗಾಗಲೇ ಜಗತ್ತಿನ

ಸಹಬಾಳ್ವೆ ಮತ್ತು ಸ್ಪರ್ಧೆಯ ತತ್ವವನ್ನೇ ನಂಬಿಕೊಂಡು ಕೈಚೆಲ್ಲಿಕುಳಿತಿಲ್ಲ. ಸಾಮ್ರಾಜ್ಯಶಾಹಿ ಬಣದ ಷಡ್ಯಂತ್ರಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಬೇಕಾದಂತಹ ಶಸ್ತ್ರ ಸಾಮರ್ಥ್ಯವನ್ನು ಅದು ಗಳಿಸಿಕೊಂಡಿದೆ. ಸ್ವತಃ ಶಸ್ತ್ರ ಸಿದ್ಧತೆಯ ಮೂಲಕ ಎಚ್ಚರಿಕೆ ವಹಿಸಿ ಸಾಮ್ರಾಜ್ಯಶಾಹಿಯ ಯುದ್ಧ ಪಿಪಾಸೆಗೆ ತಡೆಯೊಡ್ಡುವುದು ಮತ್ತು ರಾಷ್ಟ್ರೀಯ ವಿಮೋಚನಾ ರಂಗಗಳಲ್ಲಿ ಸಾಮ್ರಾಜ್ಯಶಾಹಿ ಸವಾಲೆಸೆದಾಗ ಅದನ್ನು ಪರಿಣಾಮಕಾರಿಯಾಗಿ ಎದುರಿಸುವುದು—ಈ ಎರಡೂ ವಿಧಾನಗಳಲ್ಲಿ ಸೋವಿಯತ್ ರಶ್ಯಾ ತಾನು ಸರಿಯಾದ ನಿಲುವೆಯನ್ನು ಅಂಗೀಕರಿಸಿರುವುದನ್ನು ತೋರಿಸಿಕೊಟ್ಟಿದೆ, ಅಥವಾ ತನ್ನ ಅಂಗೀಕೃತ ನಿಲುವೆಗಳಲ್ಲಿ ವಸ್ತುನಿಷ್ಠ ತಿದ್ದುಪಡಿಯನ್ನು ಮಾಡಿಕೊಂಡಿದೆ. ನಮ್ಮ ಹನ್ನೊಂದನೇ ಅಧಿವೇಶನದ ರಾಜಕೀಯ ನಿರ್ಣಯದಲ್ಲಿ ನಾವು ಈ ವಿಚಾರವನ್ನು ಗುರುತಿಸಿದ್ದೇವೆ. ಇಷ್ಟಕ್ಕೇ ನಾವು 'ಸೋವಿಯತ್ ಪರ'ವಾಗಿ ಬಿಟ್ಟದ್ದೇವೆ ಎಂದು ಕೆಲವರು ತೀರ್ಮಾನಿಸಿಬಿಟ್ಟಿದ್ದಾರೆ. ಕೆಲವರು ಇನ್ನೂ ಮುಂದೆ ಹೋಗಿ ನಾವು 'ಸಾಮ್ರಾಜ್ಞಿಯ ವಿಧೇಯ ವಿರೋಧ ಪಕ್ಷ'ವಾಗುತ್ತಿದ್ದೇವೆಂದೂ ಭವಿಷ್ಯ ನುಡಿದಿದ್ದಾರೆ. ಇದೆಲ್ಲ ತೀರಾ ಹಾಸ್ಯಾಸ್ಪದ ವಿಚಾರ ಸರಣಿಯೆಂದು ಪ್ರತ್ಯೇಕ ಹೇಳಬೇಕೆ?

ಮೇಲೆ ಹೇಳಲಾಗಿರುವ ಮಹತ್ವದ ಎರಡು ಪ್ರಶ್ನೆಗಳಲ್ಲಿ ಸೋವಿಯತ್ ರಶ್ಯಾ ಹೇಗೆ ತನ್ನ ಅಂತರಾಷ್ಟ್ರೀಯ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಿದೆಯೋ ಅದೇ ರೀತಿ ಚೀನಾ ಈ ಎರಡೂ ಪ್ರಶ್ನೆಗಳಲ್ಲೂ ತಪ್ಪು ದಾರಿಯನ್ನು ತುಳಿದಿದೆ. ಸೋವಿಯತ್ ಒಕ್ಕೂಟವನ್ನು 'ಸಮಾಜವಾದಿ ಸಾಮ್ರಾಜ್ಯಶಾಹಿ' ಎಂದೂ ವಿಶ್ವದ ಜನತೆಯ 'ಮೊದಲನೇ ಶತ್ರು'ವೆಂದೂ ಸಾರುವ

ಮೂಲಕ ಚೀನೀ ಕಮ್ಯುನಿಸ್ಟ್ ಪಕ್ಷ ತನ್ನ ಜೂನ್ 14ರ ಪತ್ರದಲ್ಲಿ ಹೇಳಲಾದ ಸಾಮಾನ್ಯ ನೀತಿಗೆ ವ್ಯತಿರಿಕ್ತವಾಗಿ ನಡೆದುಕೊಂಡಿದೆ. ನಾವು ನಮ್ಮ ಪಕ್ಷವನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹೆಸರಿನಲ್ಲಿ ಸಂಘಟಿಸುತ್ತಿದ್ದ ಕಾಲದಲ್ಲೇ ಚೀನೀ ಕಮ್ಯುನಿಸ್ಟ್ ಪಕ್ಷ ತನ್ನ ಜೂನ್ 14ರ ಪತ್ರವನ್ನು ಪ್ರಕಟಿಸಿತ್ತು; ಆಗ ನಮ್ಮ ಸಂಗಾತಿಗಳು ಅದನ್ನು ಹೃತ್ಪೂರ್ವಕವಾಗಿ ಸ್ವಾಗತಿಸಿದ್ದರು. ಈ 'ಸಾಮಾನ್ಯ ನೀತಿ'ಯಲ್ಲಿ ಸಾಮ್ರಾಜ್ಯಶಾಹಿ ಬಣ ಮತ್ತು ಸಮಾಜವಾದಿ ಬಣಗಳ ನಡುವಣ ವೈರುಧ್ಯ, ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಸ್ವಾಮ್ಯವರ್ಗ ಮತ್ತು ಕಾರ್ಮಿಕ ವರ್ಗದ ನಡುವೆ ವೈರುಧ್ಯ, ಅಭಿವೃದ್ಧಿ ಹೊಂದಿದ ರಾಷ್ಟ್ರಗಳು ಮತ್ತು ಹಿಂದುಳಿದ ರಾಷ್ಟ್ರಗಳ ನಡುವಣ ವೈರುಧ್ಯ

ಯಿಂದ ಸಮಾಜವಾದೀ ವ್ಯವಸ್ಥೆಗೆ ಸ್ಥಿತ್ಯಂತರಗೊಳ್ಳುತ್ತಿರುವ, ಅಂತರಾಷ್ಟ್ರೀಯ ಸಮಾಜವಾದಿ ವ್ಯವಸ್ಥೆಯು ಜಾಗತಿಕ ವಿದ್ಯಮಾನಗಳಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿರುವ, ರಾಷ್ಟ್ರೀಯ ವಿಮೋಚನಾ ಚಳುವಳಿ ಮತ್ತು ಸಮಾಜವಾದಿ ಕ್ರಾಂತಿಯ ಪರ್ವ. ಇದು ವಸಾಹತುಶಾಹಿ ತೀವ್ರವಾಗಿ ಕ್ಷೀಣಿಸಿ ನಶಿಸಿಹೋಗುತ್ತಿರುವ ಯುಗ; ಅಳಿವಿನ ಅಂಚಿನಲ್ಲಿರುವ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಸಮಾಜವಾದಿ ಹಾಗೂ ರಾಷ್ಟ್ರೀಯ ವಿಮೋಚನಾ ಚಳುವಳಿಗಳು ಬೃಹತ್ ವರ್ಗ ಹೋರಾಟಗಳನ್ನು ನಡೆಸುತ್ತಿರುವ ಕಾಲ; ಜಾಗತಿಕ ಮಟ್ಟದಲ್ಲಿ ಸಾಮ್ರಾಜ್ಯಶಾಹಿ ಕುಸಿದು ಸಮಾಜವಾದ ಹಾಗೂ ಸಮತಾವಾದಗಳು ಅಂತಿಮ ವಿಜಯ ಗಳಿಸುವ ಯುಗದ ಆರಂಭ" ಎನ್ನಲಾಗಿದೆ.

ಎನ್ನುವ ಅರ್ಥವಿದೆ. ಚೀನೀ ಜನತಾ ಪ್ರಜಾಪ್ರಭುತ್ವದಲ್ಲಿ ಸಮಾಜವಾದಿ ವ್ಯವಸ್ಥೆ ಇದೆ. ಅಲ್ಲಿ ಅಧಿಕಾರ ವಹಿಸಿರುವ ವರ್ಗವು ಸಾಮ್ರಾಜ್ಯಶಾಹಿಯ ಮಿತ್ರನಾಗಿರುವುದು ಅಸಾಧ್ಯ. ಚೀನಾವು ಸಾಮ್ರಾಜ್ಯಶಾಹಿ ಅಮೇರಿಕಾದೊಂದಿಗೆ ತನ್ನ ವಿದೇಶಾಂಗ ನೀತಿಯನ್ನು

ವಿ. ಜೆ. ಕೆ ನಾಯರ್

ಸಮನ್ವಯಗೊಳಿಸಿಕೊಂಡಿರುವ ಮೂಲಕ ಸಾಮ್ರಾಜ್ಯಶಾಹಿಗೆ ಶರಣಾಗಿರುವುದು ಅದರ ಎಡ ಪಂಥವಾದಿ ಮಾದರಿಯ ಪರಿಷ್ಕರಣವಾದದ ಲಕ್ಷಣ ಅಷ್ಟೆ. ಹಾಗಾಗಿ ನಮ್ಮ ಪಕ್ಷವು ಚೈನಾದ ದೋಷಪೂರ್ಣ ವಿದೇಶ ನೀತಿಗಾಗಿ

ಮುಂಡಗೋಡದಲ್ಲಿ ರೈತ ಕೂಲಿಕಾರರ ಮೆರವಣಿಗೆ

ವಿಲ್ ಪಾಯಿಂಟಿನ ಮೇಲೆ ವಸೂಲಿ ಮಾಡುತ್ತಿರುವ ಲೇವಿ ಆಕರಣೆಯನ್ನು ಕೈಬಿಟ್ಟು, ರೈತರಿಂದ 150 ರೂ. ಬೆಲೆಗೆ ಭತ್ತ ಖರೀದಿಸಬೇಕು. ರೈತ ಕೂಲಿಕಾರರಿಗೆ ಪರ್ಮಿಟ್‌ನ ಮೇಲೆ ಕೊಡಲಾಗುತ್ತಿದ್ದ ಕಟ್ಟಿಗೆ ಪುನಃ ದೊರೆಯಬೇಕು ಮುಂತಾದ ಬೇಡಿಕೆಗಳಿಗೋಸ್ಕರ ಒತ್ತಾಯಿಸಿ 19-2-82 ರಂದು ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡದಲ್ಲಿ ರೈತ ಕಾರ್ಮಿಕರ ಮೆರವಣಿಗೆ, ಬಹಿರಂಗ ಸಭೆ ನಡೆಯಿತು. ಮೆರವಣಿಗೆಯ ನೇತೃತ್ವವನ್ನು ಕಾಂ। ಎಂ. ಎಸ್. ಧಾರೇಶ್ವರ ವಹಿಸಿದ್ದರು.

ಈ ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದ ಹೆಚ್ಚಿನಂಶ ರೈತ–ಕೂಲಿಕಾರರು ಮುಂಡಗೋಡ ತಾಲ್ಲೂಕಿನ ಹಾಳೂರು ಎಂಬ ಊರಿನವರು. ಸುತ್ತ ಅರಣ್ಯ ಮಧ್ಯ ಇರುವ ಈ ಊರವರಿಗೆ ಹಿಂದಿನ ಬ್ರಿಟಿಷ್ ಸರಕಾರ ಗ್ರಾಮಸ್ಥರ ಜೀವನ ನಿರ್ವಹಣೆಗಾಗಿ ಕೆಲವು ಸವಲತ್ತುಗಳನ್ನು ಕೂಡ ಮಾಡಿತ್ತು (ಅರಣ್ಯಗಳಿಂದ ಒಣಗಿದ ಕಟ್ಟಿಗೆಯನ್ನು ಚಕ್ಕಡಿಯ ಮೇಲೆ ಸ್ವಂತ ಉಪಯೋಗಕ್ಕಾಗಿ ತರುವದು, ದನಕರುಗಳನ್ನು ಅರಣ್ಯದಲ್ಲಿ ಮೇಯಿಸಲಿಕ್ಕೆ ಬಿಡಲು, ರಿಯಾಯಿತಿಯಲ್ಲಿ ಕಟ್ಟಿಗೆ ಪೂರೈಸುವದು... ಇತ್ಯಾದಿ).

ಈಗ ನಮ್ಮವರೇ ಆಡಳಿತಕ್ಕೆ ಬಂದ ನಂತರ ಹಾಳೂರಿನ ಬಡಪಾಯಿ ಗ್ರಾಮಸ್ಥರಿಗೆ ಬ್ರಿಟಿಷ್ ಸರಕಾರದಿಂದ ದೊರೆತಿದ್ದ ಸೌಲಭ್ಯಗಳು ಕ್ರಮೇಣ ಸಿಗಲಾರದಂತಾಯಿತು. ಅರಣ್ಯ ಅಧಿಕಾರಿಗಳು ಕನಿಷ್ಠ ಅವಶ್ಯಕತೆಗಳಿಗಾಗಿ ಕೂಡ ಕಟ್ಟಿಗೆ ಪಡೆಯಲು ಅನುಮತಿ ಚೀಟಿಯನ್ನು ದಯಪಾಲಿಸುತ್ತಿಲ್ಲ. ಈ ಗ್ರಾಮಸ್ಥರಿಗೆ ಕೊಡಮಾಡಿದ್ದ ಸೌಲಭ್ಯಗಳು ದುರುಪಯೋಗವಾಗಿದ್ದ ಸಂದರ್ಭದಲ್ಲಿ ಸವಲತ್ತುಗಳನ್ನು ಮೊಟಕುಗೊಳಿಸಬಹುದಿತ್ತು.

ಆದರೆ ಅರಣ್ಯ ಅಧಿಕಾರಿಗಳು ಈ ಬಡಪಾಯಿಗಳಲ್ಲಿರುವ ಅಲ್ಪ-ಸ್ವಲ್ಪವನ್ನೂ ಕಿತ್ತುಕೊಳ್ಳಲು ನಾನಾ ರೀತಿಯ ಉಪಟಳ ಕೊಡುತ್ತಿದ್ದಾರೆ.

ಕೊನೆಗೂ ಎಚ್ಚತ್ತಿರುವ ಗ್ರಾಮಸ್ಥರು ತಮಗಾಗುತ್ತಿರುದ ಕಿರುಕುಳ ತಡೆಯಬೇಕೆಂದೂ ಮತ್ತು ಕೆಲವು ಬೇಡಿಕೆಗಳನ್ನೂ ಮುಂದಿಟ್ಟು ಮೆರವಣಿಗೆ ನಡೆಸಿದ್ದಾರೆ. ಕಾಂ॥ ಧಾರೇಶ್ವರರ ನೇತೃತ್ವದಲ್ಲಿ ನಿಯೋಗವೊಂದು ತಹಸೀಲ್ದಾರರಿಗೆ ಮನವಿ ಕೊಟ್ಟಿದೆ.

ತಮ್ಮ ಮನವಿಗೆ ಕಿವಿಗೊಡದಿದ್ದಲ್ಲಿ ಚಳುವಳಿ ಹೂಡಬೇಕಾದೀತೆಂದೂ ಎಚ್ಚರಿಕೆಯನ್ನೂ ಮನವಿ ಒಳಗೊಂಡಿದೆ.

ಪುತ್ತೂರು ತಾಲ್ಲೂಕು ರೈತ ಸಂಘದ ಸಮ್ಮೇಳನ

17-2-82 ರಂದು ದ. ಕ. ಜಿಲ್ಲೆಯ ಪುತ್ತೂರು ತಾಲ್ಲೂಕಿನ ರೈತ ಸಂಘದ ಪ್ರಥಮ ಸಮ್ಮೇಳನವು ನೆಲ್ಯಾಡಿಯಲ್ಲಿ ಜರುಗಿತು. ಪ್ರತಿನಿಧಿ ಸಮಾವೇಶದ ಅಧ್ಯಕ್ಷತೆಯನ್ನು ಕಾಂ। ಜನಾರ್ಧನ ನಾಯಕ್‌ರು ವಹಿಸಿದ್ದರು.

ಸಮ್ಮೇಳನದಲ್ಲಿ ಪಾಲ್ಗೊಂಡಿದ್ದ ಪ್ರತಿನಿಧಿಗಳು ಮಾತನಾಡಿ ಸಂಘಟನೆಯನ್ನು ವಿಸ್ತರಿಸುವ ಕುರಿತು ಸಲಹೆ ಸೂಚನೆಗಳನ್ನಿತ್ತರು. ನಂತರ ತಾಲ್ಲೂಕು ರೈತ ಸಂಘದ ಅಧ್ಯಕ್ಷರಾಗಿ ಕಾಂ। ತಂಬನ್, ಉಪಾಧ್ಯಕ್ಷರಾಗಿ ಕಾಂ। ವಿ. ವಿ. ಜೋಸೆಫ್, ಕಾರ್ಯದರ್ಶಿಯಾಗಿ ಜೋಸೆಫ್, ಉಪ-ಕಾರ್ಯದರ್ಶಿಯಾಗಿ ಕಾ। ಎಚ್. ಲಕ್ಷ್ಮಣಗೌಡ, ಹಾಗೂ ಖಜಾಂಚಿಯಾಗಿ ಸಾಂತಪ್ಪ ನಾಯಕರನ್ನು ಆಯ್ಕೆ ಮಾಡಲಾಯಿತು. ಅಲ್ಲದೆ 7 ಜನರ ಕಾರ್ಯಕಾರಿ ಸಮಿತಿಯನ್ನು ಚುನಾಯಿಸಲಾಯಿತು.

ಅಧಿವೇಶನಕ್ಕೆ ಮುನ್ನ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ। ಜನಾರ್ಧನ್ ನಾಯಕ್, ಬಿ. ರಾಮಕೃಷ್ಣ ಹಾಗೂ ಕಾಂ। ಪರಮೇಶ್ವರ ನಂಬೀಶನ್ ಮೊದಲಾದವರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ಕಾಂ। ತಂಬನ್ ವಹಿಸಿದ್ದರು.

ಹನ್ನೊಂದನೇ ಅಧಿವೇಶನದ ಕುರಿತು

ಹಾಗೂ ಸಾಮ್ರಾಜ್ಯಶಾಹಿ ಏಕಸ್ವಾಮ್ಯವಾದಿ ರಾಷ್ಟ್ರಗಳೊಳಗೆ ಇರುವ ಪರಸ್ಪರ ವೈರುಧ್ಯ ಹೀಗೆ ನಾಲ್ಕು ಪ್ರಮುಖ ವೈರುಧ್ಯಗಳನ್ನು ಗುರುತಿಸಲಾಗಿತ್ತು.

ಚೀನೀ ಕಮ್ಯುನಿಸ್ಟ್ ಪಕ್ಷ ಸೋವಿಯತ್ ಒಕ್ಕೂಟವನ್ನು 'ಸಮಾಜವಾದಿ ಸಾಮ್ರಾಜ್ಯಶಾಹಿ'ಯೆಂದು ನಿಂದಿಸಿದ್ದಾಗ ನಾವು ಅದನ್ನು ಖಂಡಿಸಿದೆವು. ಈ ವಿಶ್ಲೇಷಣೆ 'ಸಾಮಾನ್ಯ ನೀತಿಗೆ' ಸಂಪೂರ್ಣ ವ್ಯತಿರಿಕ್ತವಾಗಿದೆ. ಮೇಲಿನ ನಾಲ್ಕು ವೈರುಧ್ಯಗಳು ನಮಗೆ ಗೋಚರಿಸುವುದು ನಾವು ಹೊಸಯುಗದ ವಿಶ್ಲೇಷಣೆಗೆ ತೊಡಗಿದಾಗ. ಈ ಹೊಸ ಯುಗ ಅಥವಾ ಪರ್ವಕಾಲವೆಂದರೆ ಬಂಡವಾಳಶಾಹಿ ಪದ್ಧತಿಯಿಂದಸಮಾಜವಾದಿ ಪದ್ಧತಿಗೆ ಸ್ಥಿತ್ಯಂತರವಾಗುವ ಕಾಲದ ಪ್ರಾರಂಭ. ಜಗತ್ತಿನ ಪ್ರಥಮ ಸಮಾಜವಾದಿ ರಾಷ್ಟ್ರವಾಗಿರುವ ಸೋವಿಯತ್ ರಶ್ಯಾ, ಅಂದರೆ ಸಮಾಜವಾದೀ ಜಗತ್ತಿನ ಒಂದು ಅರ್ಧ ಭಾಗವೇ ಬಂಡವಾಳಶಾಹಿ ಪದ್ಧತಿಯನ್ನು ಸ್ವೀಕರಿಸಿ ಸಾಮ್ರಾಜ್ಯಶಾಹಿಯಾಗಿಬಿಟ್ಟರೆ ಮತ್ತು ಅದು ವಿಶ್ವದ ಇತರ ರಾಷ್ಟ್ರಗಳನ್ನೂ ಜನತೆಯನ್ನೂ ದಮನಿಸಿ ತನ್ನ ಮುಂದಾಳುತ್ವವನ್ನು ಸ್ಥಾಪಿಸಿಕೊಂಡಿದ್ದರೆ ಅನಿವಾರ್ಯವಾಗಿಯೇ ಸಮಾಜವಾದಿ ವ್ಯವಸ್ಥೆ ಇನ್ನೂ ಉಳಿದಿಲ್ಲವೆಂದೂ ಅದನ್ನು ಸ್ಥಾಪಿಸಿದ ಜನರಲ್ಲಿ ಅರ್ಧಾಂಶ ಜನ ಬಂಡವಾಳಶಾಹಿಯನ್ನು ಮರಳಿ ಸ್ವೀಕರಿಸಿದ್ದಾರೆಂದು ಅರ್ಥವಾಗುತ್ತದೆ. ಹಾಗಾದರೆ ಇದು ಬಂಡವಾಳಶಾಹಿಯಿಂದ ಸಮಾಜವಾದಕ್ಕೆ ಸ್ಥಿತ್ಯಂತರಗೊಳ್ಳುತ್ತಿರುವ ಯುಗದ ಆರಂಭ ಅಲ್ಲ, ಬದಲಾಗಿ ಇದು ಸಮಾಜವಾದದ ವೈಫಲ್ಯ ಮತ್ತು ಬಂಡವಾಳಶಾಹಿಯ ಪುನರುತ್ಥಾನದ ಯುಗ ಅಷ್ಟೆ. ನಮ್ಮ ಪಕ್ಷ 1965 ರಲ್ಲಿ ಪ್ರಕಟಿಸಿದ ಸೈದ್ಧಾಂತಿಕ ನಿರ್ಣಯದಲ್ಲಿ ಹೀಗೆ ಹೇಳಲಾಗಿದೆ. "ನಮ್ಮದು ನಿಶ್ಚಯವಾಗಿಯೂ ಒಂದು ಹೊಸ ಯುಗ, ಇದು ಬಂಡವಾಳಶಾಹಿ

ಸೋವಿಯತ್ ರಶ್ಯಾ ಸಮಾಜವಾದಿ ಸಾಮ್ರಾಜ್ಯಶಾಹಿಯಾಗಿದೆ ಎಂಬ ಚೀನೀ ಕಮ್ಯುನಿಸ್ಟ್ ಪಕ್ಷದ ವಾದ ಸರಿಯೆಂದಾದರೆ ಮೇಲಿನ ವಿವರಣೆ ತಿರುವುಮುರುವಾಗುತ್ತದೆ. ಆದರೆ ಸ್ವತಃ ಚೀನೀ ಕಮ್ಯುನಿಸ್ಟ್ ಪಕ್ಷವೇ ಈ ಹೊಸ ಯುಗದ ಬಗ್ಗೆ ಇದಕ್ಕಿಂತ ಬೇರೆಯಾದ ವಿಶ್ಲೇಷಣೆಯನ್ನೇನೂ ನೀಡಿಲ್ಲ. ಹಾಗಾಗಿ ಚೀನೀ ಕಮ್ಯುನಿಸ್ಟ್ ಪಕ್ಷದ ನಿಲುಮೆಯನ್ನು ನಮ್ಮ ಪಕ್ಷ 1968 ರಲ್ಲಿ ಅಂಗೀಕರಿಸಿದ್ದ ಸೈದ್ಧಾಂತಿಕ ನಿರ್ಣಯದಲ್ಲಿ ನಾವು ಖಂಡಿಸಿದ್ದೇವೆ. "ಸೈದ್ಧಾಂತಿಕ ಚರ್ಚೆಯ ಸಮಾರೋಪ" (Ideological debate suemmed up) ಎಂಬ ಶೀರ್ಷಿಕೆಯಲ್ಲಿ ನಾವು ಪ್ರಕಟಿಸಿದ ನಿರ್ಣಯವು "ಸಮಾಜವಾದಿ ಸಾಮ್ರಾಜ್ಯಶಾಹಿ" ಸಿದ್ಧಾಂತವನ್ನು ಇಂಚು ಇಂಚಿಗೂ ವಿರೋಧಿಸಿ ಖಂಡಿಸಿದೆ. ಬಹುಶಃ ಇದೇ ಹೇಳಿಕೆಯನ್ನು ನಾವು ಈಗೇನಾದರೂ ಪ್ರಕಟಿಸಿದ್ದರೆ ನಮ್ಮನ್ನು ಸದಾ ಗಮನಿಸುತ್ತಿರುವ ಟೀಕಾಕಾರರು ತಕ್ಷಣ "ಓ... ಇವರು ಚೀನೀ ಕಮ್ಯುನಿಸ್ಟ್ ಪಕ್ಷವನ್ನು ಕೈಬಿಟ್ಟು ರಶಿಯನ್ ಕಮ್ಯುನಿಸ್ಟ್ ಪಕ್ಷಕ್ಕೆ ಜೋತು ಬಿದ್ದಿದ್ದಾರೆ" ಎಂದು ಹೇಳುತಿದ್ದುದು ಖಂಡಿತ.ಆದರೆ ಆಗಿನ ಕಾಲದಲ್ಲಿ ಕೆಲವು ಪತ್ರಕರ್ತರು ನಮ್ಮ ಪಕ್ಷವನ್ನು ಸಾಕಷ್ಟು ಎಚ್ಚರಿಕೆಯಿಂದ ಗಮನಿಸುವಷ್ಟು ಜಾಣರಾಗಿರಲಿಲ್ಲ. ಇತ್ತೀಚಿಗೆ ನಮ್ಮ ಪಕ್ಷದ ಧೋರಣೆ ಒಂದು ನಿರ್ಣಾಯಕ ಶಕ್ತಿಯಾಗಿ ಬೆಳೆದ ಮೇಲಷ್ಟೇ ಈ ಜನ ನಮ್ಮನ್ನು ಗಮನಿಸುವಂತಾಗಿದೆ.

ಸೋವಿಯತ್ ಪಕ್ಷದ ಕೆಲವು ಹಿಂಬಾಲಕರು ಹೇಳುವಂತೆ ಚೈನಾವು ಸಾಮ್ರಾಜ್ಯಶಾಹಿಯ ಮಿತ್ರನಾಗಿದೆ ಎಂಬ ವಾದವನ್ನೂ ನಾವು ಮೇಲೆ ಹೇಳಿದ ಕಾರಣಗಳಿಗಾಗಿಯೇ ಒಪ್ಪುವುದಿಲ್ಲ, "ಮೈತ್ರಿ" ಎಂಬ ಶಬ್ದಕ್ಕೆ ಮಾರ್ಕ್ಸ್‌ವಾದದಲ್ಲಿ "ವರ್ಗದ ಮೈತ್ರಿ"

ಅದನ್ನು ಟೀಕಿಸಿದರೂ ಚೀನೀ ನಿಂದಕರ ಗುಂಪಿಗೆ ಸೇರಲು ಸರ್ವಥಾ ಸಿದ್ಧವಿಲ್ಲ.

ಭಾರತವನ್ನೂ ಒಳಗೊಂಡಂತೆ ಹಿಂದುಳಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿನ ಆಳುವ ಬೂರ್ಶ್ವಾ-ಭೂಮಾಲಿಕ ಪಕ್ಷಗಳಿಗೆ ಅನುಕೂಲವಾಗುವ ರೀತಿಯಲ್ಲಿ ವಿಶ್ವದ ಅನೇಕ ರಾಷ್ಟ್ರಗಳಲ್ಲಿ ಅಧಿಕಾರ ನಡೆಸುತ್ತಿರುವ ಕಮ್ಯುನಿಸ್ಟ್ ಪಕ್ಷಗಳು ಅನುಸರಿಸುತ್ತಿರುವ ತಪ್ಪು ನೀತಿಯನ್ನು ನಮ್ಮ ಪಕ್ಷದ 11ನೇ ಅಧಿವೇಶನದ ರಾಜಕೀಯ ಗೊತ್ತುವಳಿ ಖಂಡಿಸಿದೆ.

ಹಾಂ! ಬೇರೆಯವರು ಈ ರೀತಿ ಬೇರೆ ಬೇರೆ ಹಂತದಲ್ಲಿ ವಿವಿಧ ಕಡೆಗೆ ವಾಲಿದ್ದರೆ ಈ ವಾಲುವಿಕೆಯ ಕೋನ ಎಷ್ಟು ಎನ್ನುವುದನ್ನು ಧಾರಾಳವಾಗಿ ಅಳತೆ ಮಾಡಲಿ. ಅದು ಬಿಟ್ಟು ಪೀಸಾ ನಗರದ ಗೋಪುರ ವಾಲುತ್ತಿದ್ದರೆ 'ಅಯ್ಯೋ ಪ್ರಪಂಚವೇ ವಾಲುತ್ತಿದೆ' ಯೆನ್ನುವುದು ಮಾತ್ರ ಸರಿಯಲ್ಲ.

ಜಾಗತಿಕ ಮಟ್ಟದಲ್ಲಿ ಅತ್ಯಂತಪ್ರಮುಖ ವೈರುಧ್ಯವೆಂದರೆ ಸ್ವಾಮ್ಯವರ್ಗ ಮತ್ತು ಕಾರ್ಮಿಕ ವರ್ಗದ ನಡುವಿನ ವೈರುಧ್ಯ. ಇತರ ಮುಖ್ಯ ವೈರುಧ್ಯಗಳಲ್ಲೂ ಒಂದಲ್ಲೊಂದು ವೈರುಧ್ಯವು ಬೇರೆ ಬೇರೆ ಕಾಲಮಟ್ಟದಲ್ಲಿ ಅತ್ಯಂತ ಪ್ರಮುಖ ವೈರುಧ್ಯವಾಗಿ ಬೆಳೆದು ಬರಬಹುದು. ಆದರೆ ಇದು ಇತರ ವೈರುಧ್ಯಗಳ ಪ್ರಾಮುಖ್ಯವನ್ನು ಅಲ್ಲಗಳೆಯಲಾರದು. ಅತ್ಯಂತ ಪ್ರಮುಖ ವೈರುಧ್ಯದ ಮೇಲೆ ನಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಿ ಕಾರ್ಯ ಪ್ರವೃತ್ತರಾಗುವ ಮೂಲಕ ಇತರ ವೈರುಧ್ಯಗಳನ್ನು ಸಮಾಜವಾದಿ ಬಣಕ್ಕೆ ಅನುಕೂಲವಾಗುವಂತೆ ಪರಿವರ್ತಿಸಿಕೊಳ್ಳಬಹುದು. ಬೇರೆ ಬೇರೆ ರಾಷ್ಟ್ರಗಳಲ್ಲಿ ಅಧಿಕಾರದಲ್ಲಿರುವ ಕಮ್ಯುನಿಸ್ಟ್ ಪಕ್ಷಗಳು ಇದನ್ನು ಗುರುತಿಸುವಲ್ಲಿ ವಿಫಲರಾದರೆ ಅಂಥವರು ಜಗತ್ತಿನಲ್ಲಿ ಯಾವ ರಾಷ್ಟ್ರವನ್ನೂ ಹೊರತುಪಡಿಸದೆ ಎಲ್ಲಾ ದೇಶಗಳಲ್ಲೂ ನಡೆಯುವ ವರ್ಗ ಹೋರಾಟಗಳಿಗೆ ಬೆಂಬಲ (ಪ್ರಚಾರ, ಸಹಾನುಭೂತಿ ಮತ್ತು ಭೌತಿಕ ನೆರವು) ನೀಡಲೇಬೇಕಾದ ಏಕಮಾತ್ರ ಮಾರ್ಗವನ್ನು ಅನುಸರಿಸದಿರುವ ತಪ್ಪು ಮಾಡುತ್ತವೆ.

ಜಗತ್ತಿನ ಸಮಾಜವಾದಿ ಶಕ್ತಿಗಳ ಐಕ್ಯಕ್ಕಾಗಿ ಸಿ.ಪಿ.ಐ. (ಎಂ) ತನ್ನೆಲ್ಲಾ ಶ್ರಮ ವಹಿಸಿ ದುಡಿಯುತ್ತದೆನ್ನುವುದನ್ನು ಪಕ್ಷದ ಹನ್ನೊಂದನೇ ಕಾಂಗ್ರೆಸ್ ನಿಸ್ಸಂಶಯವಾಗಿ ತೋರಿಸಿಕೊಟ್ಟಿದೆ.

ಪಕ್ಷ ಸಂಯುಕ್ತರಂಗ ಹಾಗೂ ಜನತೆ

ಪಶ್ಚಿಮ ಬಂಗಾಳದ ಮೂರು ದಶಕಗಳ ಹೋರಾಟದ ಅನುಭವ

—ಜ್ಯೋತಿಬಸು

(ಹಿಂದಿನ ಸಂಚಿಕೆಯಿಂದ)

ಪಶ್ಚಿಮ ಬಂಗಾಳದಲ್ಲಿ ಸಂಯುಕ್ತರಂಗ ರೂಪಗೊಂಡದ್ದು ಮೂಲಭೂತವಾಗಿ ಚುನಾವಣೆಗಳಲ್ಲಲ್ಲ; ಸಾಮೂಹಿಕ ಆಂದೋಲನ ಹಾಗೂ ಹೋರಾಟಗಳಲ್ಲಿ. ಆದರೆ ಚುನಾವಣೆಗಳಲ್ಲಿ ಸಂಯುಕ್ತರಂಗ ಪರಿಣಾಮಕಾರಿ ಪಾತ್ರ ವಹಿಸಿತು. ಒಗ್ಗಟ್ಟು ಸ್ಥಾಪಿಸಿರುವ ನಮ್ಮ ಪಕ್ಷದ ಪ್ರಯತ್ನಗಳಿಗೆ ಪ್ರತಿಫಲ ದೊರೆಯಿತು. ನಮ್ಮ ಪಕ್ಷದ ಪ್ರಭಾವ ಬೇಗನೇ ಹರಡಿತು.

1957 ರ ಚುನಾವಣೆಗಳಲ್ಲಿ ಪಕ್ಷ ಗೆದ್ದ ಸ್ಥಾನಗಳ ಸಂಖ್ಯೆ 28ರಿಂದ 46 ಕ್ಕೇರಿತು; 1962ರಲ್ಲಿ ಚೀನಾ-ಭಾರತ ಗಡಿವಿವಾದದ ಹಿನ್ನೆಲೆಯಲ್ಲಿ ಅದು 50 ಕ್ಕೇರಿತು; 1964ರಲ್ಲಿ ಪಕ್ಷ ವಿಭಜನೆಗೊಂಡಿತು. ನಮ್ಮ ಹಲವು ನಾಯಕರನ್ನು ಹಾಗೂ ಸದಸ್ಯರನ್ನು ಬಂಧಿಸಲಾಯಿತು. ಆದರೆ 1966ರ ಆಹಾರ ಚಳುವಳಿ ಹಾಗೂ ರಾಜಕೀಯ ಬಂದಿಗಳ ಬಿಡುಗಡೆಯ ಬೇಡಿಕೆಯಿಂದಾಗಿರಾಜ್ಯದ ರಾಜಕೀಯ ಪರಿಸ್ಥಿತಿಯಲ್ಲಿ ಒಂದು ಹೊಸ ತಿರುವು ಕಾಣಿಸಿಕೊಂಡಿತು. ಅಜೋಯ್ ಮುಖರ್ಜಿಯವರ ನೇತೃತ್ವದಲ್ಲಿನ ಭಿನ್ನಮತೀಯ ಕಾಂಗ್ರೆಸ್ಸಿಗರು ಒಂದು ಹೊಸ ಪಕ್ಷ ರಚಿಸಿದರು.

1967ರ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷ ಹಾಗೂ ನಮ್ಮ ನೇತೃತ್ವದಲ್ಲಿನ ಮತ್ತು ಸಿ.ಪಿ.ಐ., ಬಂಗ್ಲಾ ಕಾಂಗ್ರೆಸ್ ನೇತೃತ್ವದಲ್ಲಿನ ಸಂಯುಕ್ತರಂಗಗಳ ನಡುವೆ ತ್ರಿಕೋಣ ಸ್ಪರ್ಧೆಯಿತ್ತು. ಆದರೆ ವಿರೋಧೀ ಪಕ್ಷಗಳ ಮತಗಳು ಒಡೆದು ಹೋಗಿದ್ದರೂ ಕಾಂಗ್ರೆಸ್ ಪಕ್ಷ ಸೋತುಹೋಯಿತು. ನಮಗೆ 43 ಸ್ಥಾನಗಳು ದೊರೆತವು. ಇದು ವಿರೋಧಿ ಪಕ್ಷಗಳು ಪಡೆದ ಸ್ಥಾನಗಳಲ್ಲಿ ಅತ್ಯಂತ ಹೆಚ್ಚಿನದು. ನಂತರದ ಸ್ಥಾನ ಬಂಗ್ಲಾ ಕಾಂಗ್ರೆಸ್‌ಗೆ-34 ಸೀಟುಗಳು. ಕಾಂಗ್ರೆಸ್‌ಗೆ 280ರಲ್ಲಿ 127 ಸ್ಥಾನಗಳು ದೊರೆತವು. ಚುನಾವಣೆಯ ನಂತರ ಕಾಂಗ್ರೆಸ್ಸೇತರ ಸರಕಾರ ರಚಿಸಬೇಕೆಂಬ ಜನತೆಯ ಅಭಿಲಾಷೆಗಳ ಅನುಗುಣವಾಗಿ ಒಂದು ಕನಿಷ್ಟ ಕಾರ್ಯಕ್ರಮದ ಆಧಾರದ ಮೇಲೆ ಎರಡು ಸಂಯುಕ್ತ ರಂಗಗಳು ಪರಸ್ಪರ ಹತ್ತಿರ ಬಂದವು. ನಮ್ಮ ಪಕ್ಷ ವಿರೋಧ ಪಕ್ಷಗಳಲ್ಲಿ ಅತ್ಯಂತ ದೊಡ್ಡ ಪಕ್ಷವಾಗಿದ್ದು ಮುಖ್ಯಮಂತ್ರಿಯ ಸ್ಥಾನಕ್ಕೆ ಕೇಳುವ ಅರ್ಹತೆ ಪಡೆದಿದ್ದರೂ ಬಾಂಗ್ಲಾ ಕಾಂಗ್ರೆಸ್ ಇದಕ್ಕೆ ವಿರೋಧಿಸಿದ್ದರಿಂದ ನಾವು ಆ ಬಗ್ಗೆ ಒತ್ತಾಯ ಮಾಡಲಿಲ್ಲ. ಚುನಾವಣೆಯಲ್ಲಿ ಸೋಲನ್ನುಂಡ ನಂತರ ಕಾಂಗ್ರೆಸ್ ಪಕ್ಷ ನಮ್ಮ ನಡುವಿನ ಜಗಳಗಳ ಲಾಭ ಪಡೆದು ಮತ್ತೆ ಅಧಿಕಾರಕ್ಕೆ ಮರಳದಂತೆ ನೋಡಿಕೊಳ್ಳುವುದು ನಮ್ಮ ಮುಖ್ಯ ಉದ್ದೇಶವಾಗಿತ್ತು. ಈ ಸಂಯುಕ್ತರಂಗ ಸರಕಾರ ಅಂತ್ಯದಲ್ಲಿ ಕೇಂದ್ರ ಸರಕಾರದ ಸಂಚಿನಿಂದಾಗಿ ಉರುಳಿಸಲ್ಪಟ್ಟಿತು. ಬಾಂಗ್ಲಾ ಕಾಂಗ್ರೆಸ್‌ನಿಂದ ಪಕ್ಷಾಂತರಗೊಂಡವರು ಕಾಂಗ್ರೆಸ್‌ನ ಬೆಂಬಲದಿಂದ ರಚಿಸಿದ ಹೊಸ ಸರಕಾರ ಕೆಲವು ತಿಂಗಳುಗಳ ಕಾಲವೂ ಉಳಿಯಲಿಲ್ಲ.

ಅಕ್ಟೋಬರ್ 2, 1967 ರಂದು ಸಂಯುಕ್ತರಂಗ ಸರಕಾರವನ್ನು ಉರುಳಿಸುವ ಸಂಚಿನಲ್ಲಿ ಹಾಗೂ ಕಾಂಗ್ರೆಸ್ ಬೆಂಬಲದಿಂದ ಹೊಸ ಸರಕಾರ ರಚಿಸುವಲ್ಲಿ ಅಜೋಯ್ ಮುಖರ್ಜಿಯವರು ಅವಿಭಾಜ್ಯ ಅಂಗವಾಗಿದ್ದರು ಎಂದು ಸರ್ವರಿಗೂ ತಿಳಿದ ವಿಷಯವಾಗಿದ್ದರೂ 1969ರ ಚುನಾವಣೆಗಳಲ್ಲಿ ಮತ್ತೆ ಅಜೋಯ್ ಮುಖರ್ಜಿಯವರ ಬಾಂಗ್ಲಾ ಕಾಂಗ್ರೆಸ್ಸನ್ನು ನಮ್ಮ ಸಹಯೋಗಿಯಾಗಿ ಸ್ವೀಕರಿಸಿದೆವು. ಪರಿಸ್ಥಿತಿಯ ಆವಶ್ಯಕತೆಗನುಗುಣವಾಗಿ ನಾವು ಒಂದು ಪಂಥವಾದೀ ದೃಷ್ಟಿ ಅನುಸರಿಸಲು ನಿರಾಕರಿಸಿದೆವು. ಸಂದೇಹಾಸ್ಪದ ಚರಿತ್ರೆ ಹೊಂದಿದ ಬಾಂಗ್ಲಾ ಕಾಂಗ್ರೆಸ್ಸಿಗೂ ಸಂಯುಕ್ತ ರಂಗದಲ್ಲಿ ಅವಕಾಶ ಕೊಟ್ಟೆವು. ಚುನಾವಣೆಯಲ್ಲಿ ನಮ್ಮ ಪಕ್ಷದ ಬಲ 43ರಿಂದ 80ಕ್ಕೇರಿದರೂ ಈ ಎರಡನೇ ಸಂಯುಕ್ತರಂಗ ಸರಕಾರದಲ್ಲೂ ಅಜೋಯ್ ಮುಖರ್ಜಿಯವರ ಮುಖ್ಯಮಂತ್ರಿತ್ವವನ್ನು ಒಪ್ಪಿಕೊಂಡೆವು. ಯಾಕೆಂದರೆ ಬೇರೆ ರೀತಿಯಲ್ಲಿ ಎಲ್ಲರನ್ನೂ ಒಟ್ಟಿಗೇ ಸೇರಿಸುವ ಸಾಧ್ಯತೆಗಳಿರಲಿಲ್ಲ.

ಆ ದಿನಗಳಲ್ಲಿ ನಕ್ಸಲೀಯರು ನಮ್ಮ ಪಕ್ಷವನ್ನು ಪರಿಷ್ಕರಣವಾದಿಯೆಂದು ಹೇಳಿ ನಮ್ಮನ್ನು ವಿರೋಧಿಸಲು, ನಮ್ಮ ಕಾರ್ಯಕರ್ತರ ಕೊಲೆ ನಡೆಸಲು ಏನು ಸಾಧ್ಯವೋ ಎಲ್ಲಾ ನಡೆಸುತ್ತಿದ್ದರು. ಆದರೂ ಜನತೆ ಹೆಚ್ಚೆಚ್ಚು ಸಂಖ್ಯೆಯಲ್ಲಿ ಕಾಂಗ್ರೆಸ್ಸಿನಿಂದ ವಿಮುಖರಾಗಿ ಎಡಪಕ್ಷಗಳತ್ತ ವಿಶೇಷವಾಗಿ ನಮ್ಮ ಪಕ್ಷದತ್ತ ಬರಹತ್ತಿದರು. 1971ರಲ್ಲಿ ಸಂಯುಕ್ತ ರಂಗ ಒಡೆದು ಹಲವು ಎಡಪಕ್ಷಗಳು ನಮ್ಮ ಮೇಲೆ 'ದೊಡ್ಡ ಪಕ್ಷದ ಯಜಮಾನಿಕೆ'ಯ ಆರೋಪ ಹೊರಿಸಿನಮ್ಮಿಂದ ದೂರ ಹೋದರೂ ನಮ್ಮ ಪಕ್ಷದ ಬಲ 1952ರ ನಂತರ ಪ್ರತೀ ಚುನಾವಣೆಗಳಲ್ಲೂ 1972ರ ಮೋಸದ ಚುನಾವಣೆಯೊಂದರಲ್ಲಿ ಬಿಟ್ಟು, ಏರುತ್ತಾ ಹೋಯಿತು. 1971ರಲ್ಲಿ ನಮ್ಮ ಪಕ್ಷದ ಬಲ 80 ರಿಂದ 113 ಕ್ಕೇರಿತು. ಮೊದಲ ಬಾರಿಗೆ ಇಂದಿರಾ ಗಾಳಿಯಿದ್ದರೂ ರಾಜ್ಯದಲ್ಲಿ ನಮ್ಮ ಪಕ್ಷ ಪ್ರಥಮ ಸ್ಥಾನ ಪಡೆಯಿತು. ಈ ಚುನಾವಣೆಗಳ ಸಮಯದಲ್ಲಿ ಫಾರ್ವರ್ಡ್ ಬ್ಲಾಕ್‌ನ ನಾಯಕ ಹಾಗೂ ಜನಪ್ರಿಯ ವ್ಯಕ್ತಿ ಹೇಮಂತ ಬಸುರವರನ್ನು ಒಂದು ಕೊಲೆಗಡುಕ ಗುಂಪು ಕೊಲೆ ಮಾಡಿತು. ಆದರೆ ಕಾಂಗ್ರೆಸ್ ತನ್ನ ರೇಡಿಯೊ ಹಾಗೂ ಪತ್ರಿಕೆಗಳ ಮೂಲಕ ಹಾಗೂ ಕೆಲವು ಎಡಪಕ್ಷಗಳೂ ಈ ಕೊಲೆಗೆ ಸಿ.ಪಿ.ಐ. (ಎಂ) ಕಾರಣ, ಸಿ.ಪಿ.ಐ. (ಎಂ) ಕೊಲೆ ರಾಜಕೀಯ ನಡೆಸುತ್ತಿದೆಯೆಂದು ಭಾರೀ ಅಪಪ್ರಚಾರ ನಡೆಸಿದರು. ಗ್ರಾಮಾಂತರದಲ್ಲಿ ಇದರ ಪರಿಣಾಮವೇನೂ ಆಗದಿದ್ದರೂ ಕಲ್ಕತ್ತಾದಂತಹ ನಗರ ಪ್ರದೇಶಗಳಲ್ಲಿ ಈ ಅಪಪ್ರಚಾರದಿಂದ ಜನ ಮೋಸ ಹೋದುದರಿಂದ ನಮಗೆ 15-16 ಸ್ಥಾನಗಳು ಕಮ್ಮಿಯಾದವು. ಇಲ್ಲವಾದರೆ ನಮಗೆ ಬಹುಮತ ದೊರೆಯುತ್ತಿತ್ತು. ನಂತರ ಈ ಹೊಲಸು ಕೊಲೆಗೂ ಮಾರ್ಕ್ಸ್‌ವಾದಿಗಳಿಗೂ ಏನೂ ಸಂಬಂಧವಿಲ್ಲ ಎಂಬುದು ದೃಢಗೊಂಡಿತು.

ನಕ್ಸಲೀಯರನ್ನು ಕುರಿತಾದ ನಿಲುವು

1967ರಲ್ಲಿ ಹಾಗೂ 1969-70ರ ಸಂಯುಕ್ತರಂಗ ಸರಕಾರಗಳಲ್ಲಿ ನಕ್ಸಲೀಯರ ಯೋಚನಾ ರೀತಿ ಹಾಗೂ ಚಟುವಟಿಕೆಗಳೂ ನಮ್ಮ ಚಳುವಳಿಗೆ ಬಹಳ ತೊಂದರೆಯುಂಟು ಮಾಡಿದವು. ತಾವು ಉತ್ತಮ ಎಡಪಂಥೀಯರು, ನಮಗಿಂತಲೂ ಹೆಚ್ಚು ಕ್ರಾಂತಿಕಾರಿಗಳೆಂದು ಪ್ರದರ್ಶಿಸುತ್ತಿದ್ದ ನಕ್ಸಲೀಯರು, ಯುವಕರು ಹಾಗೂ ವಿದ್ಯಾರ್ಥಿಗಳ ಒಂದು ಗುಂಪನ್ನು ಗೊಂದಲದಲ್ಲಿ ಬೀಳಿಸುವಲ್ಲಿ ಸಫಲರಾದರು. ಕಲ್ಕತ್ತಾ ಹಾಗೂ ಇತರ ಕೈಗಾರಿಕಾ ನಗರಗಳಲ್ಲಿ 'ವಿನಾಶ ಆಂದೋಲನ'ದ ಪ್ರಮುಖ ಗುರಿ ಸಿ.ಪಿ.ಐ. (ಎಂ)ನ ಕಾರ್ಯಕರ್ತರು. 1971ರ ಚುನಾವಣೆಗಳಲ್ಲಿ ಅವರ 'ಮುಕ್ತ ಕ್ಷೇತ್ರ'ಗಳಿಗೆ ಸಿ.ಪಿ.ಐ. (ಎಂ)ಗೆ ಮಾತ್ರ ಪ್ರವೇಶವಿರಲಿಲ್ಲ. ಕಾಂಗ್ರೆಸ್ಸೂ ಸೇರಿದಂತೆ ಉಳಿದ ಎಲ್ಲಾ ರಾಜಕೀಯ ಪಕ್ಷಗಳಿಗೆ ನಿರಾತಂಕ ಪ್ರವೇಶವಿತ್ತು. ಆದರೆ ಸೈದ್ಧಾಂತಿಕ ಹೋರಾಟದಲ್ಲಿ ಅವರ ವಿರುದ್ಧ ನಮ್ಮ ಪಕ್ಷ ಗೆದ್ದಿತು. ಆದ್ದರಿಂದಲೇ ನಮ್ಮನ್ನು ಬಿಟ್ಟು ಅವರನ್ನು ಸೇರಿಕೊಂಡವರ ಸಂಖ್ಯೆ ಹಿಡಿಯಷ್ಟು ಮಾತ್ರ. ಅವರ ಅಮಾನವೀಯ ಪ್ರಹಾರಗಳನ್ನು ನಮ್ಮ ಸಂಗಾತಿಗಳು ಧೈರ್ಯದಿಂದ ಎದುರಿಸಿದರು.

1971ರಲ್ಲಿ ನಕ್ಸಲೀಯರ ಒಂದು ವಿಭಾಗ ಕಾಂಗ್ರೆಸ್‌ಗೆ ಪಕ್ಷಾಂತರ ಹೊಂದಿ ಉಳಿದ ನಕ್ಸಲೀಯರನ್ನು ಕಾಂಗ್ರೆಸ್ ಗೂಂಡಾಗಳು ಹಾಗೂ ಪೋಲೀಸರ ಸಂಯುಕ್ತ ಕಾರ್ಯಾಚರಣೆಯಿಂದ ಸಾಮೂಹಿಕವಾಗಿ ಕೊಲೆ ಮಾಡಲಾರಂಭಿಸಿದಾಗ ನಾವು ಆ ಪೈಶಾಚಿಕ ಕೃತ್ಯವನ್ನು ತೀವ್ರವಾಗಿ ಪ್ರತಿಭಟಿಸಿದವು. ನಕ್ಸಲೀಯರು ಮಾರ್ಕ್ಸ್‌ವಾದಿ-ವಿರೋಧೀ ನಿಲುವು ತಳೆದಿದ್ದರೂ 1969ರಲ್ಲಿ ಮತ್ತು 1977ರಲ್ಲಿ ನಾವು ಸರಕಾರ ರಚಿಸಿದಾಗ ಬೇಷರತ್ತಾಗಿ ನಕ್ಸಲೀಯ ಬಂದಿಗಳನ್ನು ಬಿಡುಗಡೆ ಮಾಡಿದೆವು. ನಮ್ಮ ಹಿಂದಿನ ಕಲಹಮಯ ಸಂಬಂಧಗಳು ಯೋಗ್ಯವಾದ ಕ್ರಮಕೈಗೊಳ್ಳುವಲ್ಲಿ ನಮಗೆ ಅಡ್ಡಿಯಾಗಲಿಲ್ಲ.

1977ರ ಮೊದಲು ಹಲವು ವರ್ಷಗಳ ಕಾಲ ನಮ್ಮ ಕಾರ್ಯಕರ್ತರ ಮೇಲೆ ಭಯಾನಕ ಆಕ್ರಮಣ ನಡೆಸಿ ಅವರನ್ನು ಹೇಳತೀರದಷ್ಟು ಕಷ್ಟ-ನಷ್ಟಗಳಿಗೆ ಗುರಿಪಡಿಸಿದರೂ 1977ರಲ್ಲಿ ನಾವು ಗಳಿಸಿದ ಅಭೂತಪೂರ್ವ ಯಶಸ್ಸು ರಾಜ್ಯದಲ್ಲಿ ನಮ್ಮ ರಾಜಕೀಯ ತಳಹದಿಯ ವಿಸ್ತಾರ ಹಾಗೂ ದೃಢತೆಯನ್ನು ಸಾಬೀತುಪಡಿಸಿತು. ನಮ್ಮ ಪಕ್ಷ ಬಹುಮತ (294 ರಲ್ಲಿ 177) ಗಳಿಸಿದರೂ ನಾವು ಸಂಕುಚಿತ ಪಂಥವಾದೀ ನಿಲುವು ತಳೆಯಲಿಲ್ಲ. ಎಡರಂಗದ ಇತರ ಭಾಗೀದಾರರೊಂದಿಗೆ ಉತ್ತಮ ಅರಿವು ಬೆಳೆಸಿಕೊಂಡೆವು. ಅವರಿಗೆ ಸಲ್ಲತಕ್ಕದ್ದಕ್ಕಿಂತ ಹೆಚ್ಚಿನ ಸ್ಥಾನಗಳನ್ನು ಮಂತ್ರಿಮಂಡಳದಲ್ಲಿ ಕೊಟ್ಟೆವು, ಕೆಲವು ಬಹುಮುಖ್ಯ ಖಾತೆಗಳನ್ನು ಬಿಟ್ಟುಕೊಟ್ಟೆವು.

ಇಲ್ಲಿಯೂ ನಮ್ಮ ಯೋಚನಾ ದೃಷ್ಟಿಯಲ್ಲಿ ಆದ್ಯತೆ ಪಡೆದದ್ದು ಎಡ ಮತ್ತು ಪ್ರಜಾಸತ್ತಾತ್ಮಕ ಐಕ್ಯತೆಯ ದೂರಗಾಮೀ ಹಾಗೂ ವಿಸ್ತೃತ ಉದ್ದೇಶ. ರಾಜ್ಯದ ಅತೀ ದೊಡ್ಡ ರಾಜಕೀಯ ಶಕ್ತಿಯಾಗಿ ನಾವು ಎಲ್ಲಾ ಪಂಥವಾದೀ ಪ್ರವೃತ್ತಿಯನ್ನೂ ಬಿಡಬೇಕು, ಸಮಯ ಸಾಧಕರಾಗದಂತೆ ನೋಡಿಕೊಂಡು ಒಂದು ಸಿದ್ಧಾಂತ ಬದ್ಧ ನಿಲುವು ತಳೆಯಬೇಕು ಹಾಗೂ ಆ ಮೂಲಕ ಜನತೆಯ ಗೌರವಗಳಿಸಬೇಕೆಂಬ ಅರಿವು ನಮಗಿದೆ.

ಅಮೂಲ್ಯ ಗಳಿಕೆ

ನಾವು ಬಿಟ್ಟುಕೊಟ್ಟದ್ದಕ್ಕಿಂತಅಮೂಲ್ಯವಾದುದನ್ನು ಗಳಿಸಿಕೊಂಡಿದ್ದೇವೆ ಎಂದು ನಾನಿಲ್ಲಿ ಹೇಳಬೇಕಾಗಿದೆ. ನಮ್ಮ ಪಕ್ಷ, ಎಡರಂಗ ಹಾಗೂ ಸರಕಾರಕ್ಕೆ ಜನರ ಅಸೀಮಿತ ವಾತ್ಸಲ್ಯವನ್ನು ನಾವು ಗಳಿಸಿಕೊಂಡಿದ್ದೇವೆ. ಇದಿಲ್ಲದಿದ್ದರೆ ಕಿಸಾನ್ ಸಭಾದ ಸದಸ್ಯ ಸಂಖ್ಯೆ 4 ಲಕ್ಷದಿಂದ 40 ಲಕ್ಷವಾಗುತ್ತಿರಲಿಲ್ಲ; ಸಿ.ಐ.ಟಿ.ಯು.ನ ಸದಸ್ಯ ಸಂಖ್ಯೆ 4 ರಿಂದ 8 ಲಕ್ಷಕ್ಕೆ ಬೆಳೆಯುತ್ತಿರಲಿಲ್ಲ. ಇದೇ ರೀತಿ ಬೇರೆ ಬೇರೆ ಸಾಮೂಹಿಕ ಸಂಘಟನೆಗಳ ಬಲ ನಾಲ್ಕು ವರ್ಷಗಳಲ್ಲಿ ತೀವ್ರವಾಗಿ ಹೆಚ್ಚುತ್ತಿರಲಿಲ್ಲ.

ಈ ಸರಕಾರ ರಚನೆಯಾದಂದಿನಿಂದ ನಾವು ನಮ್ಮ ದೌರ್ಬಲ್ಯಗಳು ಹಾಗೂ ಮಿತಿಗಳನ್ನು ನಿಸ್ಸಂಕೋಚವಾಗಿ ಜನತೆಯ ಮುಂದಿಟ್ಟಿದ್ದೇವೆ. ಐದು ವರ್ಷಗಳಲ್ಲಿ ಪವಾಡ ನಡೆಸುವ ಅಥವಾ ಸ್ವರ್ಗ ನಿರ್ಮಿಸುವ ಸುಳ್ಳು ನಿರೀಕ್ಷೆ ಹುಟ್ಟಿಸಲಿಲ್ಲ. ಸಂವೈಧಾನಿಕ ಮಿತಿಗಳೊಳಗೆ ನಾವು ಏನು ಮಾಡಲು ಸಾಧ್ಯವಿಲ್ಲ ಎಂಬುದನ್ನು ಹೇಳಿದ್ದೇವೆ. ಕೇವಲ ಸರಕಾರದ ಆಡಳಿತಾತ್ಮಕ ಕ್ರಮ ಹಾಗೂ ಶಾಸನಗಳಿಂದಲೇ ಕೃಷಿ ಕಾರ್ಮಿಕರ, ಬರ್ಗಾದಾರರ ರೈತರ ಹಾಗೂ ಮಧ್ಯಮ ವರ್ಗಗಳ ಹಕ್ಕುಗಳನ್ನು ಕಾಪಾಡಲು ಸಾಧ್ಯವಾಗಲಿಕ್ಕಿಲ್ಲ. ಆದ್ದರಿಂದ ಈಗಲೂ ಸಂಘಟನೆ ಅಗತ್ಯ ಎಂಬ ಸತ್ಯವನ್ನೂ ಎಂದೂ ಮರೆಮಾಚಿಲ್ಲ. ಈ ಕಾರಣದಿಂದಲೇ ಸರಕಾರದ ಜನ-ಪರ ಧೋರಣೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುವಂತೆ ರಾಜ್ಯಾದ್ಯಂತ ಹಲವು ಆಂದೋಲನಗಳನ್ನು ಸಂಘಟಿಸಿದ್ದೇವೆ.

ಜನತೆಯ ವಿಶ್ವಾಸ

ಜನತೆಯೊಂದಿಗೆ ಪ್ರಾಮಾಣಿಕವಾಗಿ ಹಾಗೂ ಮುಚ್ಚುಮರೆಯಿಲ್ಲದೆ ವರ್ತಿಸಿದುದರಿಂದ ನಾವು ಅವರ ವಿಶ್ವಾಸಗಳಿಸಿಕೊಂಡಿದ್ದೇವೆ. ಪಂಚಾಯತು ಚುನಾವಣೆಗಳು, 1980ರ ಲೋಕಸಭಾ ಚುನಾವಣೆಗಳು, ನಂತರ ನಗರಸಭೆಯ ಚುನಾವಣೆಗಳು, ಕಲ್ಕತ್ತಾ ವಿಶ್ವವಿದ್ಯಾಲಯ ಸೆನೇಟ್ ಚುನಾವಣೆಗಳು ದುಡಿಯುವ ಜನ ಹಾಗೂ ಮಧ್ಯಮ ವರ್ಗಿಯರು ಎಡರಂಗ ಸರಕಾರದ ಬಗ್ಗೆ ಹೊಂದಿರುವ ವಿಶ್ವಾಸಕ್ಕೆ ಉದಾಹರಣೆಗಳು. ಪಕ್ಷ, ಸಾಮೂಹಿಕ ಸಂಘಟನೆ ಹಾಗೂ ಜನತೆಯ ನಿಕಟ ಸಾಂಗತ್ಯ ಜನತೆಯ ಪ್ರಜ್ಞೆಯನ್ನು ಮೇಲಕ್ಕೆತ್ತರಿಸುತ್ತದೆ. ಇಂದು ಪಶ್ಚಿಮಬಂಗಾಳದ ಅತೀ ಬಡವನಾದ ರೈತ ಹಾಗೂ ಭೂಹೀನ ಕಾರ್ಮಿಕ ಸಿ.ಪಿ.ಐ.(ಎಂ) ತನ್ನ ಪಕ್ಷ, ಈ ಸರಕಾರ ತನ್ನ ಇಚ್ಛೆಗನುಸಾರವಾಗಿ ರಚಿತವಾಗಿದೆಯೆಂದು ಭಾವಿಸಿಕೊಂಡು ಹೆಮ್ಮೆಯಿಂದ ಎದೆಯುಬ್ಬಿಸಿ ನಡೆಯುತ್ತಾನೆ. ಇದು ನಮ್ಮ ಅತ್ಯಂತ ಹಿರಿದಾದ ಸಾಧನೆ.

ನಮ್ಮ ಸಾಧನೆ ತೃಪ್ತಿಕರವಾಗಿಲ್ಲದ ಕ್ಷೇತ್ರಗಳಲ್ಲೂ ತಪ್ಪು ಸಂಪೂರ್ಣವಾಗಿ ನಮ್ಮದಲ್ಲ ಎಂಬುದನ್ನು ಜನತೆ ಈಗ ಅರ್ಥ ಮಾಡಿಕೊಳ್ಳುತ್ತಿದೆ. ಆದರೂ ಈ ಸಮಸ್ಯೆಗಳನ್ನು ಪರಿಹರಿಸಲುಕೂಡಾ ನಾವು ಶ್ರದ್ಧೆಯಿಂದ, ಪ್ರಾಮಾಣಿಕವಾಗಿ ಪ್ರಯತ್ನಿಸುತ್ತಿದ್ದೇವೆ.

ಪಕ್ಷದ ಜವಾಬ್ದಾರಿ

ಸದ್ಯದ ಎಡರಂಗ ಸರಕಾರದ ಲಕ್ಷಣ ಹಿಂದಿನ ಎರಡು ಸಂಯುಕ್ತ ರಂಗಗಳಿಗಿಂತ ತೀರಾ ಭಿನ್ನವಾಗಿದೆ ಎಂದು ಬೇರೆ ಹೇಳಬೇಕಾಗಿಲ್ಲ. ರಂಗದ ಅಂಗಪಕ್ಷಗಳಲ್ಲಿ ಪ್ರಮುಖ ಪ್ರಶ್ನೆಗಳ ಬಗ್ಗೆ ಸಹಮತಿ ಇದೆ. ಪಕ್ಷಾಂತರದಿಂದ ಸರಕಾರ ಉರುಳಬಹುದೆಂಬ ಭಯವಿಲ್ಲ. ಕೇಂದ್ರ ಸರಕಾರ ಹಾಗೂ ಕಾಂಗ್ರೆಸ್ (ಐ)ಸರ್ವ ಪ್ರಯತ್ನ ನಡೆಸಿದರೂ ಎಡರಂಗ ಸರಕಾರದ ಆಂತರಿಕ ಸುಸಂಬದ್ಧತೆ ಬಗ್ಗೆ ಸರಕಾರದಲ್ಲಿನ ನಾವು ಯಾರೂ ಎಳ್ಳಷ್ಟೂ ತಲೆಕೆಡಿಸಿಕೊಳ್ಳುವ ಅಗತ್ಯವಿಲ್ಲವೆಂದು ನಾವು ಹೆಮ್ಮೆಯಿಂದ ಹೇಳಿಕೊಳ್ಳುತ್ತೇವೆ.

(ಮುಂದುವರಿಯುವುದು)

ಬಂಡಾಯ ಸಾಹಿತ್ಯದ ವಿಚಾರ ಗೋಷ್ಠಿಗಳು

(2ನೇ ಪುಟದಿಂದ)

ಕುರಿತು ಮಾತನಾಡಿದ ಶ್ರೀ ಕಕ್ಕೇರಿ ನಾರಾಯಣ ಅವರು ಪ್ರಜಾಸತ್ತಾತ್ಮಕ ಹೋರಾಟ ಮತ್ತು ಭಾಷೆಯ ಕುರಿತು ಮಾತನಾಡಿದ ಶ್ರೀ ರಮಜಾನ ದರ್ಗಾ ಅವರು ಉರ್ದು ಮುಸ್ಲಿಮರಸೊತ್ತಲ್ಲ. ಕನ್ನಡ ಹಿಂದುಗಳ ಸೊತ್ತಲ್ಲ. ಭಾಷೆಯನ್ನು ಜಾತಿಗೆ, ಧರ್ಮಕ್ಕೆ ಸೇರಿಸುವುದನ್ನು ಖಂಡಿಸಬೇಕಾಗುತ್ತದೆ. ಹಿಂದುಗಳಿಗೆ ದೇವರ ಭ್ರಮೆ ಇರುವಂತೆ ಮುಸ್ಲಿಮರಿಗೆ ಸೈತಾನನ ಭ್ರಮೆ ಇದೆ. ಆಗಾಗ ಎಫ್. ಎಂ. ಖಾನ್‌ರಂತಹವರು ಈ ಸೈತಾನನ ರೂಪದಲ್ಲಿ ಅವತರಿಸುತ್ತಾರೆ. ಇವನ್ನು ವಿರೋಧಿಸಬೇಕಾಗುತ್ತದೆ. Practical Consciousness ಎಂದರು. ಅಧ್ಯಕ್ಷತೆ ವಹಿಸಿದ್ದ ಶ್ರೀ ಬಿ. ವಿ. ವೈಕುಂಠರಾಜು ಮಾತನಾಡುತ್ತ ಪಟ್ಟಭದ್ರರು ಜನ ಚಿಂತನೆಯಿಂದ ವಿಮುಖವಾಗುವಂತೆ ಭಾಷೆಯನ್ನು ಶೋಷಣಾ ಮಾಧ್ಯಮ ಮಾಡಿಕೊಳ್ತಾರೆ. ರೈತ-ಕಾರ್ಮಿಕರು ಅವರದೇ ಭಾಷೆಯಲ್ಲಿ ಮಾತನಾಡುವಂತೆ, ಚಿಂತಿಸುವಂತೆ ವ್ಯವಹರಿಸುವಂತೆ ಆದರೆ ನಿಜವಾದ ಪ್ರಜಾತಂತ್ರ ಎಂದರು. ಶ್ರೀ ವೇಣುಗೋಪಾಲ ಆಶಯ ಭಾಷಣ ಮಾಡಿದರು.

'ಕವಿಗೋಷ್ಠಿ' ಉದ್ಘಾಟಿಸಿದ ಶ್ರೀ ಮಂಗ್ಳೂರ ವಿಜಯ ಅವರು ದಿಗಿಲಿನ ಪ್ರತಿಕ್ರಿಯೆಗಳನ್ನು ಬಂಡಾಯ ಸಾಹಿತಿಗಳು ಗಂಭೀರವಾಗಿ ತಗೋಬೇಕಿಲ್ಲ. ಸಂಕ್ರಮಣಾವಸ್ಥೆಯ ಈ ಕಾಲದಲ್ಲಿ ಬಂಡಾಯ ಕವಿಗಳು ತಮ್ಮನ್ನು ತಾವು involve ಮಾಡಿಕೊಳ್ಳಬೇಕು. ಬಂಡಾಯದ ಕಾವ್ಯ ಕೂಡ ಕಾವ್ಯಗುಣ ಪಡೆದುಕೊಂಡು ಗೇಯತೆಪಡೆಯಬೇಕಿದೆ. ವಿಮರ್ಶಾ ಮಾನದಂಡಗಳು ಬದಲಾಗಬೇಕು. ಆದರೆ ಮಾನದಂಡಗಳನ್ನು ಈಗಲೇ ರೂಪಿಸಬೇಕಿಲ್ಲ ಎಂದರು. ಸುಮಾರು 50 ಜನ ಕವಿಗಳು ಕಾವ್ಯವಾಚನ ಮಾಡಿದರು. ಶ್ರೀ ಬಸವರಾಜ ಸಬರದ ಆಶಯ ಭಾಷಣ ಮಾಡಿದರು. ಶ್ರೀ ಜಂಬಣ್ಣ ಅಮರಚಿಂತ ಅಧ್ಯಕ್ಷತೆ ವಹಿಸಿದ್ದರು.

ಸಮಾರೋಪ ಕಾರ್ಯಕ್ರಮ

(2ನೇ ಪುಟದಿಂದ)

ಬರ್ತ್ತವೆ. ವೈವಿಧ್ಯದಿಂದ ಶ್ರೀಮಂತಿಕೆ ಬರ್ತ್ತ್ವತಿ. ಬಂಡಾಯ ಒಂದು vision ಎಲ್ಲಾ ಸಾಹಿತ್ಯ ಪ್ರಾಕಾರಗಳನ್ನು ಬಳಸಿಕೊಳ್ಳಬೇಕು."

ಅಧ್ಯಕ್ಷತೆ ವಹಿಸಿದ್ದ ಶ್ರೀ ಬರಗೂರು ರಾಮಚಂದ್ರಪ್ಪನವರು ಮಾತನಾಡುತ್ತ ಇಂದು ಬೆಳಿಗ್ಗೆ ನಾವೊಂದು ಮೆರವಣಿಗೆ ಮಾಡಿದೆವು. ಸಾಹಿತ್ಯ ಪರಿಷತ್ತಿನಲ್ಲೂ ಮೆರವಣಿಗೆ ಮಾಡ್ತಾರೆ. ನಮ್ಮ ಮೆರವಣಿಗೆ ಯಾವ ವ್ಯಕ್ತಿ ಪೂಜೆ ಅಲ್ಲ. ಅಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಮೆರವಣಿಗೆ ಮಾಡಿದರೆ ನಮ್ಮಲ್ಲಿ ಒಂದು ಪೈಸೆ ಕೂಡಾ ಖರ್ಚಿಲ್ಲದೆ ದಲಿತರ ಮೇಲಿನ ದೌರ್ಜನ್ಯ ವಿರೋಧಿಸಿ ಪ್ರತಿಭಟನಾ ಮೆರವಣಿಗೆ ತಗೆದವು. ಪರಿಷತ್ತಿನ ಮೆರವಣಿಗೆಗೂ ನಮ್ಮ ಮೆರವಣಿಗೆಗೂ ಗುಣಾತ್ಮಕ ಬದಲಾವಣೆ ಇದೆ. ಸಾಹಿತಿಗೆ ರಾಜಕೀಯ ಪ್ರಜ್ಞೆ ಬೇಕಾದರೆ ರಾಜಕಾರಣಿಗೆ ಸಾಂಸ್ಕೃತಿಕ ಪ್ರಜ್ಞೆ ಬೇಕು. ಸಮೂಹ ಚಳುವಳಿ ಮತ್ತು ಸಾಂಸ್ಕೃತಿಕ ಚಳುವಳಿಗೂ ಅಭೇದವಾದಾಗ ಬಂಡಾಯ ನಿಜವಾಗ್ಲೂ ಕ್ರಿಯಾಶೀಲವಾಗುತ್ತೆ, ಆದರೆ ಸಮೂಹ ಚಳುವಳಿಗಳು ನಿರೀಕ್ಷೆ ಮಟ್ಟದಲ್ಲಿ ಇಲ್ಲಿ ಬೆಳೀದೇ ಇರೋದ್ರಿಂದ ಒಂದು ರೀತಿಯ ಅಸಮತೋಲನ ಕಾಣುತ್ತೆ. ಆಳುವ ವರ್ಗಕ್ಕೂ ಜನತೆಗೂ ಸಂವಾದ ಸಾಧ್ಯವಾಗದೇ ಇರೋದು ಇಲ್ಲಿ ಜಾಕು, ಜೈನುಗಳ ಸಂಸ್ಕೃತಿ ಇರೋಂದ್ರಿಂದ, Photo pacismನಿಂದ. ಸಂವಾದ ಸಾಧ್ಯವಾಗದೇ ಇರೋದು ಆಳುವ ವರ್ಗದ ಧಮನಕಾರಿ ನೀತಿಯಿಂದಲೇ ಹೊರತು ಬಂಡಾಯ ಕವಿಗಳಿಂದಲ್ಲ. ಸುಳ್ಳು ಚರಿತ್ರೆಯನ್ನು ಸುಡಬೇಕು ಎನ್ನುವುದು ನಿಜ. ಆದರೆ ಹೊಸ ಸಾಹಿತ್ಯ ಚರಿತ್ರೆ ಸೃಷ್ಟಿ ಮಾಡೋದರ ಮೂಲಕ ಮೋಸದ ಚರಿತ್ರೆ ಸುಡಬೇಕು. ಪರಂಪರೆ ನಾವು ಗೌರವಿಸ್ತೇವೆ ಅನ್ನೋದ್ರಲ್ಲಿ ಪೂಜೆ ಇಲ್ಲ. ಪರಂಪರೆಯನ್ನೂ ಮುಂದುವರಿಸ್ತೇವೆ. ಈ ಸೂಕ್ಷ್ಮ ಅರ್ಥಮಾಡಿಕೊಳ್ಳಬೇಕು. ಒಟ್ಟಾರೆಯಾಗಿ ಬಂಡಾಯದ ದಿಕ್ಕು ಸರಿಯಾಗಿದೆ ಅಂತ ಗೊತ್ತಾಗ್ತ ಇದೆ.

ಪ್ರಾರಂಭದಲ್ಲಿ ಶ್ರೀ ಚನ್ನಣ್ಣ ಕಾಲೀಕಾರ ಪ್ರಾಸ್ತಾವಿಕ ಭಾಷಣ ಮಾಡಿದರು. ಎರಡೂ ದಿನ ರಾತ್ರಿ ಬೀದರ ಸಮುದಾಯದವರಿಂದ ನಾಟಕಗಳ ಪ್ರದರ್ಶನ ನಡೆಯಿತು.

ಹೋರಾಟಕ್ಕೆ ಬೆಂಬಲ

ಬೆಂಗಳೂರಿನ ಬೃಂದಾವನ ಹೋಟೆಲ್‌ನ ಆಡಳಿತ ವರ್ಗ ನೀರಿನ ಕೊರತೆ ಕಾರಣ ತೋರಿಸಿ ಸುಮಾರು 50 ಜನ ಕಾರ್ಮಿಕರನ್ನು ಕೆಲಸದಿಂದ ವಜಾ ಮಾಡಿದ್ದಾರೆ. ಈ ವಜಾಕ್ಕೆ ಮೊದಲು ಯಾವದೇ ಮುನ್ಸೂಚನೆಯನ್ನೂ ನೀಡಿಲ್ಲ.

ಸಧ್ಯದಲ್ಲೇ ಜಾರಿಯಾಗಲಿರುವ ಕನಿಷ್ಠ ವೇತನ ಕೊಡಬೇಕಾಗಬಹುದೆಂಬ ಶಂಕೆಯಿಂದ ಆಡಳಿತ ವರ್ಗ ಈ ಢಿಢೀರ್ ಕ್ರಮ ಕೈಕೊಂಡಿದೆ.

ಬೃಂದಾವನ್ ಹೋಟೇಲ್ ಆಡಳಿತ ವರ್ಗದ ಈ ಕಾನೂನು ಬಾಹಿರ ಕ್ರಮವನ್ನು ಖಂಡಿಸಿರುವ ಬೆಂಗಳೂರು ಜಿಲ್ಲಾ ಹೋಟೇಲ್ ಕಾರ್ಮಿಕರ ಸಂಘ (CITU) ದ ಪ್ರಧಾನ ಕಾರ್ಯದರ್ಶಿ ಕಾಂ| ಇ. ಕೆ. ಎನ್. ರಾಜನ್ ಅವರು ಹೋರಾಟ ನಿರತ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸಿದ್ದಾರೆ.

ಕಾಂ| ಹಳಕಟ್ಟಿ ಬಂಧನ : ಪ್ರತಿಭಟನೆ

ಧಾರವಾಡದ ಕೃಷಿ ವಿಶ್ವವಿದ್ಯಾಲಯದ ಕೃಷಿ ಕಾರ್ಮಿಕರು ಕೆಲವು ದಿನಗಳಿಂದ ಕೂಲಿ ಹೆಚ್ಚಳ, ಕೆಲಸ ಕಾಯಂ ಮಾಡುವುದು ಮೊದಲಾದ ನ್ಯಾಯಬದ್ಧ ಬೇಡಿಕೆಗಳಿಗೋಸ್ಕರ ಹೋರಾಟ ನಡೆಸಿದ್ದಾರೆ.

ಈ ಕೃಷಿ ಕೂಲಿಕಾರರ ಬೇಡಿಕೆಗಳನ್ನು ಈಡೇರಿಸುವ ಬದಲು ಕೃಷಿ ವಿಶ್ವವಿದ್ಯಾಲಯದ ಆಡಳಿತ ವರ್ಗ ಹೋರಾಟ ನಿರತ ಕಾರ್ಮಿಕರ ಮೇಲೆ ದೂರು ಸಲ್ಲಿಸಿದ್ದಾರೆ. ಪೋಲೀಸರು 18 ಜನ ಕೃಷಿ ಕಾರ್ಮಿಕರನ್ನೊಳಗೊಂಡು ಕೃಷಿ ಕಾರ್ಮಿಕರ ಸಂಘದ ಪ್ರಧಾನ ಕಾರ್ಯದರ್ಶಿ ಕಾ| ವ್ಹಿ. ಎನ್. ಹಳಕಟ್ಟಿಯವರನ್ನು ಬಂಧಿಸಿದ್ದಾರೆ.

ಕಾಂ| ಹಳಕಟ್ಟಿ ಮತ್ತಿತರರ ಬಂಧನವನ್ನು ತೀವ್ರವಾಗಿ ಖಂಡಿಸಿರುವ ಪ್ರಾಂತ ರೈತ ಸಂಘದ ಅಧ್ಯಕ್ಷ ಕಾ| ಮುಗುವಾಳಪ್ಪನವರು ಬಂಧಿತರ ಬಿಡುಗಡೆಗೆ ಒತ್ತಾಯಿಸಿದ್ದಾರೆ. (ಬಂಧಿತರನ್ನು ಮಾರ್ಚ 2 ರವರೆಗೆ ನ್ಯಾಯಾಂಗ ಕಸ್ಟಡಿಗೆ ತಳ್ಳಲಾಗಿದೆ.)

ಸದಾಕಾಲ ಬಡಬಗ್ಗರ ಬಗ್ಗೆ ಮೊಸಳೆ ಕಣ್ಣೀರು ಸುರಿಸುವ ಸರ್ಕಾರದ ನಿಜ ಬಣ್ಣ ಬಯಲಾಗಿದೆ ಎಂದಿರುವ ಕಾಂ| ಮುಗುವಾಳಪ್ಪ, ಬಂಧಿತರನ್ನು ಕೂಡಲೇ ಬಿಡುಗಡೆ ಮಾಡದಿದ್ದಲ್ಲಿ ತೀವ್ರ ಕ್ರಮ ಕೈಕೊಳ್ಳಬೇಕಾದೀತೆಂದು ಎಚ್ಚರಿಸಿದ್ದಾರೆ.

ಗಂಗನಾಳದಲ್ಲಿ ರೈತರ ಸಭೆ

ಗುಲಬರ್ಗ ಜಿಲ್ಲೆ ಶಹಾಪೂರ ತಾಲ್ಲೂಕಿನ ಗಂಗನಾಳ ಹಳ್ಳಿಯ ರೈತರಿಗೂ, ಕೃಷಿ ಕೂಲಿಕಾರರಿಗೂ ಒಂದು ಹೊಸ ಅನುಭವ. ಸ್ವಾತಂತ್ರ್ಯ ದೊರೆತು 34 ವರ್ಷಗಳು ಅಂದರೂ ವಿದ್ಯುಚ್ಛಕ್ತಿಯನ್ನು ಕಾಣದ, ದವಾಖಾನೆ ಇಲ್ಲದ, ಹೆಚ್ಚಾಗಿ ಅನಕ್ಷರಸ್ಥರಿಂದಲೇ ತುಂಬಿರುವ ಗಂಗನಾಳ ಹಳ್ಳಿಯಿಡೀ ಎದ್ದು ಬಂದಂತೆ ತೋರಿದ ಸಾರ್ವಜನಿಕ ಸಭೆ ಹಳ್ಳಿಯ ಜನರಿಗೆ ಹೊಸ ಸ್ಫೂರ್ತಿ ನೀಡಿತು. 20-2-82 ರಂದು ರಾತ್ರಿ ಹಳ್ಳಿಯಲ್ಲಿ ನಡೆದ ಬಹಿರಂಗ ಸಭೆಯಲ್ಲಿ ಡಿ. ವೈ ಎಫ್. ಐ. ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ| ಶ್ರೀರಾಮರೆಡ್ಡಿ, ಗುಲ್ಬರ್ಗ ಜಿಲ್ಲಾ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಕಾಂ| ಕಲ್ಲಪ್ಪ ಕಿರಣಗಿ ಮತ್ತು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ರಾಜ್ಯ ಸಮಿತಿ ಕಾರ್ಯದರ್ಶಿ ಕಾಂ| ಎಂ. ಕೆ. ಭಟ್ ಅವರುಗಳು ಭಾಷಣ ಮಾಡಿ ರೈತರ ಮೇಲಿನ ಶೋಷಣೆಯನ್ನು ಹೋಗಲಾಡಿಸುವುದಕ್ಕೆ ರೈತ-ಕಾರ್ಮಿಕರು ಒಂದಾಗಿ ಬಂಡವಾಳ ವ್ಯವಸ್ಥೆಯನ್ನೆ ಬದಲಾಯಿಸಬೇಕು ಎಂದು ಹೇಳಿದರು. ಭಾಷಣಕಾರರು ಭಾಷಣ ಮಾಡಿ ಮುಗಿಸುತ್ತಿದ್ದಂತೆಯೇ ನಾವೂ ಒಂದಾಗಬೇಕೆಂಬ ನಿರ್ಧಾರಕ್ಕೆ ರೈತರೂ ಬಂದಿದ್ದರು. ಇನ್ನು ಮುಂದೆ ನಮ್ಮನ್ನು ಶೋಷಣೆ ಮಾಡಲು ಬಿಡೋಲ್ಲ ಎಂಬ ಮಾತುಗಳೂ ಕೇಳಿ ಬಂದುವು.

ಶ್ರೀ ಜಹಗೀರ್‌ದಾರ್ ಅವರ ಅಧ್ಯಕ್ಷತೆಯಲ್ಲಿ ಸೇರಿದ್ದ ಬಹಿರಂಗ ಸಭೆಯಲ್ಲಿ ಶ್ರೀ ಕೃಷ್ಣ ಕಟ್ಟಿಮನೆ ಅವರು ಸ್ವಾಗತ ಭಾಷಣ ಮಾಡಿ, ಎಲ್ಲರಿಗೂ ಭಾಷಣಕಾರರನ್ನು ಪರಿಚಯ ಮಾಡಿಸಿ ಕೊಟ್ಟರು. 112 ಕಿಲೋಮೀಟರು ದೂರದ ರಾಯಚೂರಿನಿಂದ ಸೈಕಲ್ಲಿನಲ್ಲೆ ಬಂದಿದ್ದ ಸಮುದಾಯ ತಂಡದವರು ಕ್ರಾಂತಿಕಾರಿ ಗೀತೆಗಳನ್ನು ಹಾಡಿ ಹಳ್ಳಿಯ ಜನರಿಗೆ ಸ್ಫೂರ್ತಿ ನೀಡಿದರು.

"ಐ.ಎಮ್.ಎಫ್. ಸಾಲ ದೇಶದ ಹಿತಕ್ಕೆ ಮಾರಕ"

ಗುಲ್ಬರ್ಗ ವಿಶ್ವವಿದ್ಯಾಲಯ ಶಿಕ್ಷಣೇತರ ನೌಕರರ ಸಂಘದ ಆಶ್ರಯದಲ್ಲಿ ವಿಶ್ವವಿದ್ಯಾಲಯದ ಆವರಣದ ಸಭಾಂಗಣದೊಳಗೆ ಅಂತರಾಷ್ಟ್ರೀಯ ಹಣಕಾಸು ನಿಧಿಯ ಬಗ್ಗೆ ಸಿ. ಪಿ. ಐ. (ಎಂ.) ರಾಜ್ಯ ಸಮಿತಿ ಕಾರ್ಯದರ್ಶಿ ಎಂ. ಕೆ. ಭಟ್ ಅವರ ಅಧ್ಯಕ್ಷತೆಯಲ್ಲಿ ವಿಚಾರ ಗೋಷ್ಠಿಯೊಂದು ನಡೆಯಿತು. 23-2-82 ರಂದು ಮಧ್ಯಾಹ್ನ ಮೇಲೆ ನಡೆದ ಈ ಕಾರ್ಯಕ್ರಮವನ್ನು ಡಿ.ವೈ. ಎಫ್.ಐ. ರಾಜ್ಯ ಸಮಿತಿ ಪ್ರಧಾನ ಕಾರ್ಯದರ್ಶಿ ಕಾಂ| ಶ್ರೀರಾಮರೆಡ್ಡಿ ಉದ್ಘಾಟಿಸಿ ಐ. ಎಂ. ಎಫ್. ಸಾಲವು ದೇಶದ ಸ್ವಾತಂತ್ರ್ಯವನ್ನೇ ಕಬಳಿಸುತ್ತಿದೆ ಎಂದು ಹೇಳಿ ವಿವರವಾದ ಭಾಷಣ ಮಾಡಿದರು. ನಂತರ ಭಾಷಣ ಮಾಡಿದ ಅರ್ಥಶಾಸ್ತ್ರ ಪ್ರಾಧ್ಯಾಪಕ ಶ್ರೀ ಕಲ್ಲೂರು ಮಠ ಅವರು ಸರಕಾರ ಮತ್ತು ವಿರೋಧ ಪಕ್ಷಗಳ ಹಾಗೂ ಅರ್ಥಶಾಸ್ತ್ರಜ್ಞರ ದೃಷ್ಟಿಯಿಂದ ಸಾಲದ ಅವಶ್ಯಕತೆ, ಪರಿಣಾಮಗಳ ಬಗ್ಗೆ ಹೇಳುತ್ತಾ ಈ ಸಾಲದ ಪರಿಣಾಮ ಉತ್ತಮವಾಗಲಾರದೆಂಬ ಅಭಿಪ್ರಾಯ ವ್ಯಕ್ತಪಡಿಸಿದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಎಂ. ಕೆ. ಯವರು ಐ.ಎಂ.ಎಫ್. ಸಾಲದ ಷರತ್ತುಗಳನ್ನು ವಿವರಿಸಿ ಅವು ಯಾವ ರೀತಿಯಲ್ಲಿ ದೇಶದ ಜನತೆಯ ಜೀವನ ಮಟ್ಟದ ಮೇಲೂ, ಪ್ರಜಾಪ್ರಭುತ್ವ ಹಕ್ಕುಗಳ ಮೇಲೂ ಪರಿಣಾಮವೆಸಲಲಿವೆ ಮತ್ತು ಈಗಾಗಲೇ ಎಸಗುತ್ತಲಿವೆ ಎಂಬುದನ್ನು ವಿವರಿಸಿದರು. ಇದು ಒಂದು ಪಕ್ಷ ಅಥವಾ ವ್ಯಕ್ತಿಯ ಪ್ರಶ್ನೆ ಅಲ್ಲ. ದೇಶದ ಸಾರ್ವಭೌಮತ್ವ ಮತ್ತು ಜನತೆಯ ಹಕ್ಕುಗಳ ಹಾಗೂ ಜೀವನ ಮಟ್ಟದ ಪ್ರಶ್ನೆ. ಆದುದರಿಂದಲೇ ಎಲ್ಲರೂ ಪ್ರತಿಭಟನೆಯ ಸ್ವರ ಎಬ್ಬಿಸಲೇಬೇಕೆಂದು ಎಂ. ಕೆ. ಕರೆ ಇತ್ತರು. ಶಿಕ್ಷಣೇತರ ನೌಕರರ ಸಂಘದ ಮುಖಂಡ ಎಂ. ಬಿ. ಸಜ್ಜನ ಸ್ವಾಗತ ಭಾಷಣ ಮಾಡಿದರು. ಪ್ರಾಧ್ಯಾಪಕರುಗಳು ಮತ್ತು ವಿದ್ಯಾರ್ಥಿ ಹಾಗೂ ನೌಕರರಿಂದ ತುಂಬಿದ್ದ ಸಭೆಯು ಯಶಸ್ವಿಯಾಗಿ ನಡೆಯಿತು.

ಅಕ್ರಮ ಲಾಕ್‌ಔಟ್ ವಿರೋಧಿಸಿ

ಸರದಿ ಉಪವಾಸ ಸತ್ಯಾಗ್ರಹ

ಬೆಂಗಳೂರಿನ ಕ್ವಾಲಿಟಿ ಬಿಸ್ಕಟ್ ಕಂಪೆನಿಗೆ ಬಿಸ್ಕಟ್ ತುಂಬಲು ಟಿನ್ ತಯಾರು ಮಾಡುತ್ತಿದ್ದ 'ಫ್ಯಾಕ್ರೈಟ' ಕಂಪೆನಿಯನ್ನು 8-2-82ರಿಂದ ಅನಿರ್ದಿಷ್ಟ ಕಾಲ ಅಕ್ರಮವಾಗಿ ಮುಚ್ಚಲಾಗಿದೆ.

ಕೆಲಸದ ಭದ್ರತೆಯೇ ಇಲ್ಲದ ಈ ಫ್ಯಾಕ್ಟರಿಯ ಕಾರ್ಮಿಕರು ಇತ್ತೀಚೆಗೆ ತಾನೇ ಸಿ.ಐ.ಟಿ.ಯು ನೇತೃತ್ವದಲ್ಲಿ ಸಂಘಟಿತರಾಗಿದ್ದರು. ಆಡಳಿತ ವರ್ಗದ ಮುಂದೆ ಬೇಡಿಕೆಗಳನ್ನು ಮಂಡಿಸಿ 2-3 ತಿಂಗಳು ಕಳೆದಿದ್ದರೂ ಮಾತುಕತೆಗೆ ಮುಂದೆ ಬಂದಿಲ್ಲ. ಕಾರ್ಮಿಕ ಅಧಿಕಾರಿಗಳು ಜಂಟೀ ಸಭೆ ಕರೆದಿದ್ದರೂ ಮಾಲೀಕರು ಒಂದಕ್ಕೂ ಹಾಜರಾಗಿಲ್ಲ. ಕ್ವಾಲಿಟಿ ಬಿಸ್ಕಟ್ ಫ್ಯಾಕ್ಟರಿಯ ಮಾಲೀಕರೂ ಇವರೇ. ಇಲ್ಲಿ ಮಾತ್ರ ಯಾವದೇ ಸೌಲಭ್ಯಗಳೂ ಇಲ್ಲ.

ಕಾರ್ಮಿಕರು ಮುಚ್ಚಿರುವ ಮಾಲೀಕರಾದ ಶ್ರೀ ವಜ್ರಂ ಶೆಟ್ಟಿಯವರ ಮನೆ ಮುಂದೆ ಸರದಿ ಉಪವಾಸ ಸತ್ಯಾಗ್ರಹ ಹೂಡಲು ತೀರ್ಮಾನಿಸಿದ್ದು 15-2-82 ರಿಂದ ಪ್ರಾರಂಭವಾಗಿದೆ.

ಸಂಘದ ಪ್ರಧಾನರ್ಯ ಕಾರ್ಯದರ್ಶಿ ಕಾಂ| ಆರ್. ಶ್ರೀನಿವಾಸ್ ಮನವಿಯೊಂದನ್ನು ಹೊರಡಿಸಿ ಹೋರಾಟ ನಿರತ ಕಾರ್ಮಿಕರಿಗೆ ಬೆಂಬಲಿಸಬೇಕೆಂದು ಕೋರಿದ್ದಾರೆ.

ಕುಂದಾಪುರ ತಾ|| ರೈತರ ಸಮ್ಮೇಳನ

(3ನೇ ಪುಟದಿಂದ ಮುಂದುವರಿದುದು)

ಹೋರಾಟಕ್ಕೆ ಸಂಘಟಿತ ಕಾರ್ಮಿಕ ವಿಭಾಗವು ಎಲ್ಲಾ ರೀತಿಯಲ್ಲಿ ಬೆಂಬಲ ನೀಡುವುದೆಂದು ತಿಳಿಸಿ ಸಂಯುಕ್ತ ಹೋರಾಟಕ್ಕೆ ಮುಂದಾಗ ಬೇಕೆಂದರು.

ಸಂಘದ ಮುಂದಿನ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗಲು ಅನುಕೂಲವಾಗುವಂತೆ, 31 ಸದಸ್ಯರು ಇರುವ ತಾಲೂಕು ಸಮಿತಿಯನ್ನು ರಚಿಸಲಾಯಿತು. ಸಮಿತಿಯ ಅಧ್ಯಕ್ಷರಾಗಿ ಕಾಂ| ಯು. ದಾಸ ಭಂಡಾರಿಯವರನ್ನು ಆಯ್ಕೆಮಾಡಲಾಯಿತು. ಉಪಾಧ್ಯಕ್ಷರಾಗಿ ಗೋವಿಂದ ಶೆಟ್ಟಿಗಾರ್, ಚಾಂಡಿ ಮತ್ತು ಶಿವರಾಮ್‌ಶೆಟ್ಟಿ ಇವರನ್ನು ಆಯ್ಕೆ ಮಾಡಲಾಯಿತು. ಕಾ| ಅಬ್ರಹಾಂ ಕರ್ಕಡರವರನ್ನು ಕಾರ್ಯದರ್ಶಿಯಾಗಿಯೂ ಹಾಗೂ ಜತೆ ಕಾರ್ಯದರ್ಶಿಗಳಾಗಿ ವೆಂಕ್ಟೇಶ್ ನಾಯಕ್ ಮತ್ತು ಬಸವನಾಯ್ಕ್‌ರವರನ್ನು ಆಯ್ಕೆ ಮಾಡಲಾಯಿತು.

ಸಭೆಯ ಅಧ್ಯಕ್ಷತೆ ವಹಿಸಿದ ಕಾ| ಶಿವರಾಂ ಶೆಟ್ಟರವರು ಸಂಘಟನೆಯ ಬಗ್ಗೆ ಮಾತನಾಡಿ, ಜಿಲ್ಲಾ ರೈತ ಸಮ್ಮೇಳನವನ್ನು ಯಶಸ್ವಿಗೊಳಿಸಲು ಶ್ರಮಿಸಬೇಕೆಂದು ತಿಳಿಸಿದರು.

ಕೊನೆಯಲ್ಲಿ ಕಾ| ಕೆ. ವೆಂಕ್ಟೇಶ್ ನಾಯ್ಕ್ ಧನ್ಯವಾದವನ್ನು ಅರ್ಪಿಸಿದರು.

ಪ್ರತಿಭಟನಾ ಪ್ರದರ್ಶನ

(1ನೇ ಪುಟ ನೋಡಿ)

ನಂತರ ಈ ಸಚಿವರ ಆದೇಶದ ಮೇರೆಗೆ ಮಥೇಪೂರ ಪೋಲಿಸ್ ಠಾಣೆಯಲ್ಲಿ ಶ್ಯಾಮನಂದ ಗಿರಿಯವರ ಮೇಲೆ ರಾಜದ್ರೋಹದ ಆಪಾದನೆ ಹೊರಿಸಿ ಮೊಕದ್ದಮೆ ಹೂಡಲಾಯಿತು. ಘಟನೆ ಸಂಭವಿಸಿದಾಗ ಸ್ಥಳದಲ್ಲೇ ಇಲ್ಲದ ಕಾಂಗ್ರೆ ಶಾಸಕ ರಮೇಂದ್ರ ಕುಮಾರ ಯಾದವ್ ಮತ್ತು ಜಿಲ್ಲಾ ಕಾಂಗ್ರೆ ಅಧ್ಯಕ್ಷ ರಾಮಕೃಷ್ಣ ಯಾದವ್ ಸಾಕ್ಷ್ಯ ನುಡಿದಿದ್ದಾರೆ ಅಷ್ಟೇ ಅಲ್ಲದೇ ಸಚಿವರ ಕಾರಿನ ಧ್ವಜವನ್ನು ಶ್ಯಾಮನಂದ ಗಿರಿ ಮುಂತಾದವರು ಹರಿದು ಹಾಕ್ಕಿದ್ದಾರೆಂದು ಸುಳ್ಳು ಬೊಗಳಿದ್ದಾರೆ.

ಬಿಹಾರ ಸರಕಾರ ಆಜ್ಞೆಯೊಂದನ್ನು ಹೊರಡಿಸಿ ಗೊಂದಲದಲ್ಲಿ ತೊಡಗಿದವರ ಮೇಲೆ ಗುಂಡು ಹಾರಿಸಲಾಗುವದು (ಜ. 19ರಂದು) ಎಂದು ಪ್ರಕಟಿಸಿತ್ತು. ಧ್ವಜ ಹರಿದುಹಾಕಿದ ಘಟನೆನಡೆದಿದ್ದಲ್ಲಿ ಶ್ಯಾಮನಂದ ಗಿರಿ ಮುಂತಾದವರ ಮೇಲೆ ಗುಂಡು ಖಂಡಿತ ಹಾರಿಸಲಾಗುತಿತ್ತು. ಘಟನೆ ನಿಜವಾಗಿ ನಡೆದಿದ್ದರೆ ಸಚಿವರ ಅಂಗರಕ್ಷಕರು ಈ ವಿದ್ಯಾರ್ಥಿಗಳನ್ನು ಸ್ಥಳದಲ್ಲೇ ಬಂಧಿಸುತ್ತಿದ್ದರು. ಈ ಘಟನೆ ತೊಘಲಕ್ ಕೃತ್ಯಕ್ಕೆ ನಿದರ್ಶನ.

ಎಸ್ಮಾ, ಎನ್. ಎಸ್. ಎ. ಗಳನ್ನು ಧಾರಳವಾಗಿ ಉಪಯೋಗಿಸಿ ಅನೇಕರನ್ನು ಬಂಧಿಸಲಾಗಿತ್ತು. ಬಿ.ಎಚ್. ಇ.ಎಲ್. ಕೆಲಸಗಾರರ ಮೇಲೆ ಕ್ರಿಮಿನಲ್ ಪ್ರೊಸಿಜರ್ ಕೋಡ್‌ನನ್ವಯ 307 ಮತ್ತು 147 ಮೊಕದ್ದಮೆ ಹೂಡಲಾಗಿದೆ.

ಬೆಂಗಳೂರಿನ ಬಿ. ಇ. ಎಲ್. ನ ಸಿ.ಐ.ಟಿ.ಯೂ. ನೇತೃತ್ವದ ಕಾರ್ಮಿಕ ಸಂಘದ ಅಧ್ಯಕ್ಷ ಕಾಂ| ಮುನಿರೆಡ್ಡಿ ಮತ್ತು ಉಪಧ್ಯಾಕ್ಷ ಕಾಂ| ವಿಭೂತಿ ಮಠರಿಗೆ ಶೋಕಾಸ್ ನೋಟಿಸ್ ಕೊಡಲಾಗಿದೆ. 'ಕಾರ್ಮಿಕ ವಿರೋಧಿ ಇಂದಿರಾ ಸರಕಾರಕ್ಕೆ ಧಿಕ್ಕಾರ,' 'ಬೆಲೆ ಏರಿಕೆ ತಡೆಗಟ್ಟಿ' ಎಂದು ಘೋಷಣೆ ಕೂಗಿದ್ದು ಕಾಂ| ಮುನಿರೆಡ್ಡಿ ಮತ್ತು ಕಾಂ| ವಿಭೂತಿ ಮಠರ ಅಪರಾಧ !

ಫೆಬ್ರವರಿ 23ರಂದು ದೇಶದ ಎಲ್ಲೆಡೆ ಪ್ರತಿಭಟನಾ ಪ್ರದರ್ಶನ, ಧರಣಿ ಸತ್ಯಾಗ್ರಹ ನಡೆದಿವೆ. ಸಂಸತ್ ಸದನದೆದರೂ ಪ್ರತಿಭಟನಾ ಪ್ರದರ್ಶನ ನಡೆದಿದೆ.

ಫೆ. 23ರಂದು ಬೆಂಗಳೂರಿನಲ್ಲಿ ಎನ್ ಸಿ.ಸಿ. ಕರೆಯ ಮೇರೆಗೆ ಸಿ.ಐ.ಟಿ.ಯು. ನೇತೃತ್ವದಲ್ಲಿ ವಿಧಾನಸೌಧದೆರು ಧರಣೀ ಸತ್ಯಾಗ್ರಹ ಬಹಿರಂಗ ಸಭೆ ನಡೆಯಿತು. ಸಿ.ಐ.ಟಿ.ಯು. ರಾಜ್ಯ ಸಮಿತಿ ಅಧ್ಯಕ್ಷ ಕಾಂ| ಸೂರ್ಯನಾರಾಯಣರಾವ್ ಧರಣಿ ಸತ್ಯಾಗ್ರಹದ ನೇತೃತ್ವ ವಹಿಸಿದ್ದರು. ಸಿ. ಐ. ಟಿ. ಯು.ಗೆ ಸಂಯೋಜಿತ ಕಾರ್ಮಿಕ ಸಂಘಗಳ ಸುಮಾರು 400 ಕಾರ್ಯಕರ್ತರು ಧರಣಾ ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದರು.

ಸಾಯಂಕಾಲ 5 ಘಂಟೆಗೆ ನಡೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ| ಸೂರ್ಯನಾರಾಯಣರಾವ್, ಟಿ. ಎಸ್. ಅನಂತರಾಮ್, ಆರ್. ಶ್ರೀನಿವಾಸ್ ಮತ್ತು ಕಾಂ| ಪಿ. ಜಗನ್ನಾಥ ಮೊದಲಾದವರು ಮಾತನಾಡಿ ಕಾರ್ಮಿಕರ ಮೇಲೆ ನಡೆಯುತ್ತಿರುವ ದಬ್ಬಾಳಿಕೆ ಕ್ರಮಗಳನ್ನು ತೀವ್ರವಾಗಿ ಖಂಡಿಸಿದರು.

ಇತ್ತೀಚೆಗೆ ಕೇಂದ್ರ ಸರಕಾರ ಪ್ರಕಟನೆಯೊಂದನ್ನು ಹೊರಡಿಸಿ 16 ಸೇವಾ ವಿಭಾಗಗಳನ್ನು ಅಗತ್ಯಸೇವೆಗಳೆಂದು ಪಟ್ಟಿಮಾಡಿ, ಈ ಸೇವಾ ವಿಭಾಗಗಳಲ್ಲಿ ಮುಷ್ಕರ ಹೂಡುವವರನ್ನು ಶಿಕ್ಷಿಸಲಾಗುವ ಕ್ರಮವನ್ನು ಸರ್ವಾಧಿಕಾರದ ಕ್ರಮವೆಂದು ಬಣ್ಣಿಸಿದ ಕಾಂ| ಸೂರ್ಯನಾರಾಯಣರಾಯರು, ಇಂದಿರಾ ಸರಕಾರದ ಜನವಿರೋಧಿ ಧೋರಣೆಗಳ ವಿರುದ್ಧ ಸಂಘಟಿತ ಹೋರಾಟ ನಡೆಸಲು ಕರೆ ನೀಡಿದರು.

ಫೆ. 23 ರಂದು ಮೈಸೂರಿನಲ್ಲಿ ಪ್ರತಿಭಟನಾ ಪ್ರದರ್ಶನ ನಡೆಯಿತು. ನಗರದ ಕೇಂದ್ರ ತಂತೀ ಕಚೇರಿ ಎದುರುಗಡೆ ಸಿಐಟಿಯು ನೇತೃತ್ವದಲ್ಲಿ ಧರಣಿ ಮುಷ್ಕರ ನಡೆಯಿತು. ಈ ಕಾರ್ಯಕ್ರಮದಲ್ಲಿ ಸಿಐಟಿಯುಗೆ ಸಂಯೋಜಿತ ಸಂಘಗಳ ಕಾರ್ಯಕರ್ತರು ಪಾಲ್ಗೊಂಡಿದ್ದರು.

ನಂತರ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ, ರಾಜ್ಯ ಸಿಐಟಿಯು ಸಮಿತಿ ಸದಸ್ಯ ಕಾಂ| ಮೋಹನ್ ಕುಮಾರ್ ಮಾತನಾಡಿ, ಇಂದಿರಾ ಸರಕಾರದ ಕಾರ್ಮಿಕ ವಿರೋಧಿ ಧೋರಣೆಯನ್ನು ತೀವ್ರವಾಗಿ ಖಂಡಿಸಿ, ಮುಂದಿನ ದಿನಗಳಲ್ಲಿ ಮಹತ್ತರವಾದ ಹೋರಾಟಗಳಿಗೆ ಕಾರ್ಮಿಕರು ಸಿದ್ಧರಾಗಬೇಕೆಂದು ಕರೆ ನೀಡಿದರು.

ಕೋಲಾರದ ಕೆ.ಜಿ.ಎಫ್.ನ ಬಿ.ಜೆ.ಎಂ.ಎಲ್. ಆಫೀಸೆದುರು ಬಿ.ಜಿ.ಎಂ. ಎಂಪ್ಲಾಯೀಸ್ ಯೂನಿಯನ್‌ನ ಪದಾಧಿಕಾರಿಗಳು ಫೆಬ್ರವರಿ 23ರಂದು ಧರಣಾ ಸತ್ಯಾಗ್ರಹ ನಡೆಸಿದ್ದಾರೆ. ಧರಣಾ ಕಾರ್ಯಕ್ರಮದ ನೇತೃತ್ವವನ್ನು ಕಾಂ| ಟಿ. ಎಸ್. ಮಣಿ, ಎ. ಕಣ್ಣ್, ಸವರೀದಾಸ್, ಜಿ. ಆರ್‌ತೂರ್ ಮೊದಲಾದವರು ವಹಿಸಿದ್ದರು.

ಬಿಜಾಪೂರದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳಾದ ಸಿಐಟಿಯು, ಏಐಟಿಯುಸಿ. ಮತ್ತು ಸಿಪಿಐ (ಎಂ), ಸಿಪಿಐ, ಕಾಂಗ್ರೆಸ್ (ಎಸ್), ಜನತಾ ಪಾರ್ಟಿ ಮತ್ತು ಜಿಲ್ಲಾ ರೈತ ಸಂಘಗಳ ಮುಖಂಡರು ಕಾರ್ಮಿಕರ ಮೇಲೆ ನಡೆದಿರುವ ದಮನಕಾರಿ ಕ್ರಮಗಳನ್ನು ಪ್ರತಿಭಟಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿದರು.

(ರಾಜ್ಯದ ಬೇರೆ ಬೇರೆ ಕಡೆ ಧರಣಾ ಸತ್ಯಾಗ್ರಹ ನಡೆದಿರುವ ವರದಿಯಾಗಿದ್ದು ವಿವರಗಳನ್ನು ಮುಂದಿನವಾರ ಪ್ರಕಟಿಸಲಾಗುವದು)

ಕಿಡಿ ನಂದಿತು

ಶೇರ್-ಎ-ಆಜಂ (ಶ್ರೇಷ್ಠ ಕವಿ) ಎಂದು ಖ್ಯಾತರಾಗಿದ್ದ ಪ್ರಖ್ಯಾತ ಉರ್ದುಕವಿ ಜೋಶ್ ಮಲಿಹಾಬಾದಿ ತಮ್ಮ 83ನೇ ವಯಸ್ಸಿನಲ್ಲಿ ಇಸ್ಲಾಮಾಬಾದ್‌ನಲ್ಲಿ ನಿಧನರಾದ ದುಃಖಕರ ವಾರ್ತೆ ಬಂದಿದೆ.

ತಮ್ಮ ಹರಿತ ಲೇಖನಿಯಿಂದ ಆಳುವ ವರ್ಗಗಳನ್ನು ತಲ್ಲಣಗೊಳಿಸಿದ್ದ ಜೋಶ್ ತಮ್ಮ ಜೀವನದುದ್ದಕ್ಕೂ ತುಳಿಯಲ್ಪಟ್ಟವರಿಗಾಗಿ ಶ್ರಮಿಸಿದ್ದರು.

1898 ಡಿಸೆಂಬರ್ 5ರಂದು ಉತ್ತರ ಪ್ರದೇಶದ ಮಲಿಹಾಬಾದ್‌ನಲ್ಲಿ ಜನಿಸಿದ್ದ ಜೋಶ್ ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ತಮ್ಮ ಕಾವ್ಯ (ಶಾಯರಿ)ದ ಮೂಲಕ ಜನರನ್ನು ಬಡಿದೆಬ್ಬಿಸಿದ್ದರು. 1956 ರಲ್ಲಿ ಪಾಕಿಸ್ತಾನಕ್ಕೆ ವಲಸೆ ಹೋಗಿದ್ದರು. ಅಲ್ಲಿ ಮಿಲಿಟರಿ ಆಡಳಿತಗಾರರ ಕಾಕದೃಷ್ಟಿಗೆ ಒಳಗಾಗಿದ್ದರೂ ತಮ್ಮ ಸತ್ವವನ್ನು ಬಿಟ್ಟುಕೊಟ್ಟಿರಲಿಲ್ಲ.

ಉಪಖಂಡದ ಪ್ರಖ್ಯಾತ ಕ್ರಾಂತಿಕಾರಿ ಕವಿ ಜೋಶ್‌ರ ನಿಧನಕ್ಕೆ ಐಕ್ಯರಂಗ ತನ್ನ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಉಡುಪಿ ತಾಲ್ಲೂಕು ರೈತ ಸಮ್ಮೇಳನ

16-2-82 ರಂದು ಪಡುಬಿದ್ರಿಯಲ್ಲಿರುವ ಗುರುನಾರಾಯಣ ಮಂದಿರದಲ್ಲಿ ಉಡುಪಿ ತಾಲ್ಲೂಕು ರೈತ ಸಮ್ಮೇಳನ ನಡೆಯಿತು. ಸಮ್ಮೇಳನದ ಅಧ್ಯಕ್ಷತೆಯನ್ನು ಕಾಂ| ರಾಮ್. ಕೆ. ಕುಂದರ್ ವಹಿಸಿದ್ದರ. ಆರಂಭದಲ್ಲಿ ಕೆ. ಲಕ್ಷ್ಮಣ ಸ್ವಾಗತಿಸಿದರು.

ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ| ಅಬ್ರಹಾಂ ಕರ್ಕಡ ಮತ್ತು ಕಾಂ| ಜನಾರ್ದನ ನಾಯಕ್ ಮಾತನಾಡುತ್ತಾ, ಭೂಮಾಲೀಕರ ದಬ್ಬಾಳಿಕೆ ಎದುರಿಸಿ ಕೃಷಿ ಕೂಲಿಕಾರರು ನಡೆಸಿದ ಹೋರಾಟದ ಹಿನ್ನೆಲೆಯನ್ನು ವಿವರಿಸಿದರು.

ಸಮ್ಮೇಳನಕ್ಕೆ ತಾಲ್ಲೂಕಿನ ವಿವಿಧ ಭಾಗಗಳಿಂದ 45 ಪ್ರತಿನಿಧಿಗಳು ಆಗಮಿಸಿದ್ದರು.

ಸಮ್ಮೇಳನದ ಅಂಗವಾಗಿ ಸಾಯಂಕಾಲ 4 ಘಂಟೆಗೆ ಪಡುಬದ್ರಿಯ ಪೇಟೆಯಲ್ಲಿ ಬಹಿರಂಗ ಸಭೆ ನಡೆಸಲಾಯಿತು. ಸಭೆಗೆ ಮುನ್ನ ಮೆರವಣಿಗೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ| ಜಿ. ನಾರಾಯಣ ಸುವರ್ಣ ವಹಿಸಿದ್ದರು ಆರಂಭದಲ್ಲಿ ಕಾಂ| ರಾಮ್ ಕುಂದರ್ ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ ಕಾಂ| ಅಬ್ರಹಾಂ ಕರ್ಕಡ, ಜನಾರ್ಧನ ನಾಯಕ್ ಮತ್ತು ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಉಡುಪಿಯ ಖ್ಯಾತ ನ್ಯಾಯವಾದಿ ಶ್ರೀಧರ ಕಲಾಡಿಯವರು ಮಾತನಾಡಿದರು.

ಕೊನೆಯಲ್ಲಿ ಕಾಂ| ಡೇವಿಡ್ ಕರ್ಕಡ ಧನ್ಯವಾದ ಸಲ್ಲಿಸಿದರು.

ಪರಿಸರ....

★ ಮನೆಕಟ್ಟುವುದಕ್ಕೂ ಸಿಮೆಂಟ್ ಹಂಚುತ್ತಿದ್ದೇವೆ. ಯಾವುದೋ ಒಂದು ಕಾರ್ಖಾನೆ ಮುಚ್ಚಿದರೆ ಕಾರ್ಮಿಕರು ಬೀದಿ ಪಾಲಾದರು ಎಂದು ಗಲಾಟೆ ಮಾಡುತ್ತಾರೆ. ಇಲ್ಲಿ ಬಹು ಅಂತಸ್ತಿನ ಕಟ್ಟಡಗಳ ನಿರ್ಮಾಣ ಕಾರ್ಯದಲ್ಲಿ ಬಹುತೇಕ ಬಿಜಾಪೂರ, ಕಲ್ಬುರ್ಗಿ ಕಡೆ ನಿರಾಶ್ರಿತರು ದುಡಿಯುತ್ತಿದ್ದಾರೆ. ಕೆಲಸ ಇಲ್ಲದೆ ಅವರಿಗೆ ತೊಂದರೆ ಆಗಿದ್ದನ್ನು ಯಾರೂ ಗಮನಿಸಿಲ್ಲ... ನಾವೇನೂ ಸಿಮೆಂಟನ್ನು ರಸೆಲ್ ಮಾರ್ಕೆಟ್‌ಗೆ ಒಯ್ದು ಹರಾಜು ಮಾಡಿಲ್ಲ.

—ಮಾಣಿಕ್‌ರಾವ್ ಪಾಟೀಲ್, ಸಿಮೆಂಟ್ ಹಗರಣ ಕುರಿತು

★ ಹಲವು ಅಂತಸ್ತುಗಳ ವಸತಿ ನಿರ್ಮಾಪಕರಿಗೆ ಸಿಮೆಂಟ್ ಹಂಚಿರುವುದು ನನ್ನ ವಿವೇಚನೆಗೆ ಸೇರಿದ್ದು, ಅದನ್ನು ನಾನು ಸರಿಯಾಗೇ ಮಾಡಿದ್ದೇನೆ... ಸಮಿತಿಗೆ ಯಾರಾದರೂ ಅಧಿಕಾರಿ ತಪ್ಪು ಮಾಹಿತಿ ನೀಡಿದ್ದಲ್ಲಿ ಅಂಥವರ ವಿರುದ್ಧ ಕ್ರಮ ಕೈಕೊಳ್ಳಲಾಗುವುದು.

—ಮುಖ್ಯ ಮಂತ್ರಿ ಗುಂಡೂರಾವ್, ಸಿಮೆಂಟ್ ಹಗರಣ ಕುರಿತು

★ ಕೆಲವರು ಅಂತುಲೆಯನ್ನು ರಾಬಿನ್‌ಹುಡ್‌ಗೆ ಹೋಲಿಸುತ್ತಿದ್ದಾರೆ. ಇದು ಚರಿತ್ರೆಗೇ ಅವಮಾನಕರ. ರಾಬಿನ್‌ಹುಡ್ ಭ್ರಷ್ಟನಾಗಿರಲಿಲ್ಲ...ಅಲ್ಲದೇ ಅವನು ಮುಖ್ಯ ಮಂತ್ರಿಯೂ ಆಗಿರಲಿಲ್ಲ.

—'ಮೈನ್ ಸ್ಟ್ರೀಮ್'ನಲ್ಲಿ ಸಂಪಾದಕೀಯ

★ ಕಾಂಗ್ರೆ ಪಕ್ಷವು ಅಧಿಕಾರಕ್ಕೆ ಬಂದ ನಂತರ ಬೆಲೆಗಳು ಗಣನೀಯ ಪ್ರಮಾಣದಲ್ಲಿ ಇಳಿದಿವೆ ಮತ್ತು ಹಣದುಬ್ಬರ ಈಗ ಶೇಕಡಾ 5 ರಷ್ಟಕ್ಕೆ ಇಳಿದಿದೆ. ದೇಶವು ಈಗ ಆಹಾರ ಧಾನ್ಯಗಳಲ್ಲಿ ಸ್ವಯಂಪೂರ್ಣವಾಗಿದೆ. ನಾವೀಗ ಎಲ್ಲಾ ಕ್ಷೇತ್ರಗಳಲ್ಲೂ ಪ್ರಗತಿ ಸಾಧಿಸುತ್ತಿದ್ದೇವೆ.

—ಪ್ರಧಾನಿ ಇಂದಿರಾಗಾಂಧಿ, ಇಂದೋರ್‌ನಲ್ಲಿ

★ ಇಂದಿನಿಂದ ನನ್ನ ನಿದ್ರಾರಹಿತ ರಾತ್ರಿಗಳನ್ನು ನಿಮಗೆ ವರ್ಗಾಯಿಸುತ್ತಿದ್ದೇನೆ.

— ಮಾಜಿ ಅರ್ಥಮಂತ್ರಿ ವೆಂಕಟರಾಮನ್ ಪ್ರಣಬ್ ಮುಖರ್ಜಿಯವರಿಗೆ ಅರ್ಥಖಾತೆ ವಹಿಸಿಕೊಡುತ್ತಾ ಹೇಳಿದ ಉದ್ಗಾರ

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053. Editorial and managerial office :L-56, K. V. Temple Street Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR : M. K. BHAT.